# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತೆಂಟನೆಯ ಅಧಿವೇಶನ

**19ನೇ ಡಿಸೆಂಬರ್ 2022**
**ಸೋಮವಾರ**

## ವಿಷಯಾನುಕ್ರಮಣಿಕೆ (INDEX)

### ಸಂತಾಪ ಸೂಚನೆಗಳು

ಹಾಲಿ ವಿಧಾನ ಸಭೆಯ ಶಾಸಕರು ಹಾಗೂ ಉಪ ಸಭಾಧ್ಯಕ್ಷರಾದ ಶ್ರೀ ಆನಂದ ಮಾಮನಿ, ವಿಧಾನ ಪರಿಷತ್ತಿನ ಮಾಜಿ ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಜಬ್ಬಾರ್ ಖಾನ್ ಹೊನ್ನಳ್ಳಿ, ವಿಧಾನ ಪರಿಷತ್ತಿನ ಮಾಜಿ ಶಾಸಕರಾದ ಶ್ರೀ ಎಸ್.ಎಸ್.ಪೂಜಾರಿ, ವಿಧಾನ ಸಭೆಯ ಮಾಜಿ ಸದಸ್ಯರು ಹಾಗೂ ಮಾಜಿ ಸಚಿವರಾದ ಶ್ರೀ ಸುಧೀಂದ್ರರಾವ್ ಕಸಬೆ, ಲೋಕಸಭೆ ಮಾಜಿ ಸದಸ್ಯರಾದ ಶ್ರೀ ಕೋಳೂರು ಬಸನಗೌಡ, ರಾಜ್ಯಸಭಾ ಮಾಜಿ ಸದಸ್ಯರಾದ ಶ್ರೀ ಅಬ್ದುಲ್ ಸಮದ್ ಸಿದ್ಧಿಖಿ, ಕನ್ನಡ ಚಲನಚಿತ್ರ ರಂಗದ ನಟರು ಹಾಗೂ ನಾಟಕಕಾರರಾದ ಶ್ರೀ ಲೋಹಿತಾಶ್ವ, ಭಾಗವತರು ಹಾಗೂ ಯಕ್ಷಗಾನ ಕಲಾವಿದರಾದ ಶ್ರೀ ಬಂಗಾರ್ ಆಚಾರ್, ಕೆರೆ ನಿರ್ಮಾತೃ ಕಲ್ಮನೆ ಕಾಮೇಗೌಡ ಹಾಗೂ ವೇದಾಂತ ವಿದ್ವಾನ್ ಶ್ರೀ ಆರ್.ಎಲ್.ಕಶ್ಯಪ್ ಅವರುಗಳ ನಿಧನದ ಬಗ್ಗೆ.

- ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)
- ಶ್ರೀ ಪ್ರಕಾಶ್ ಕೆ. ರಾಥೋಡ್ (ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಚನ್ನರಾಜ್ ಬಸವರಾಜ್ ಹಟ್ಟಿಹೊಳಿ
- ಡಾ॥ ತೇಜಸ್ವಿನಿ ಗೌಡ
- ಶ್ರೀ ಸಲೀಂ ಅಹಮದ್

- ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
- ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.
- ಶ್ರೀ ಗೋವಿಂದ ಎಂ.ಕಾರಜೋಳ (ಜಲಸಂಪನ್ಮೂಲ ಸಚಿವರು)
- ಶ್ರೀ ಎನ್. ರವಿಕುಮಾರ್
- ಶ್ರೀ ಎಸ್.ವ್ಹಿ.ಸಂಕನೂರ

~ ~ ~ ~ ~ ~ ~

(1039) 19.12.2022 11.10 TCH-BNS

## ಕರ್ನಾಟಕ ವಿಧಾನ ಪರಿಷತ್ತು

**ಸೋಮವಾರ, 19ನೇ ಡಿಸೆಂಬರ್ 2022**

**ಸದನವು ಬೆಳಗಾವಿಯ ಸುವರ್ಣ ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಬೆಳಗ್ಗೆ 11 ಗಂಟೆ 12 ನಿಮಿಷಕ್ಕೆ ಸಮಾವೇಶಗೊಂಡಿತು**

**ಸಭಾಪತಿಯವರಾದ ಶ್ರೀ ರಘುನಾಥ್ ರಾವ್ ಮಲ್ಕಾಪೂರೆ ಅವರು ಪೀಠದಲ್ಲಿ ಉಪಸ್ಥಿತರಾದರು**

**(ಸದನವು `ವಂದೇ ಮಾತರಂ' ಗೀತೆಯೊಂದಿಗೆ ಪ್ರಾರಂಭವಾಯಿತು)**

**ಸಭಾಪತಿಯವರು:-** ಈಗ ಸಂತಾಪ ಸೂಚನೆಗಳು.

## ಸಂತಾಪ ಸೂಚನೆಗಳು

**ವಿಷಯ:- ಹಾಲಿ ವಿಧಾನ ಸಭೆಯ ಶಾಸಕರು ಹಾಗೂ ಉಪ ಸಭಾಧ್ಯಕ್ಷರಾದ ಶ್ರೀ ಆನಂದ ಮಾಮನಿ, ವಿಧಾನ ಪರಿಷತ್ತಿನ ಮಾಜಿ ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಜಬ್ಬಾರ್ ಖಾನ್ ಹೊನ್ನಳ್ಳಿ, ವಿಧಾನ ಪರಿಷತ್ತಿನ ಮಾಜಿ ಶಾಸಕರಾದ ಶ್ರೀ ಎಸ್.ಎಸ್.ಪೂಜಾರಿ, ವಿಧಾನ ಸಭೆಯ ಮಾಜಿ ಸದಸ್ಯರು ಹಾಗೂ ಮಾಜಿ ಸಚಿವರಾದ ಶ್ರೀ ಸುಧೀಂದ್ರರಾವ್ ಕಸಬೆ, ಲೋಕಸಭೆ ಮಾಜಿ ಸದಸ್ಯರಾದ ಶ್ರೀ ಕೋಳೂರು ಬಸನಗೌಡ, ರಾಜ್ಯಸಭಾ ಮಾಜಿ ಸದಸ್ಯರಾದ ಶ್ರೀ ಅಬ್ದುಲ್ ಸಮದ್ ಸಿದ್ಧಿಖಿ, ಕನ್ನಡ ಚಲನಚಿತ್ರ ರಂಗದ ನಟರು ಹಾಗೂ ನಾಟಕಕಾರರಾದ ಶ್ರೀ ಲೋಹಿತಾಶ್ವ, ಭಾಗವತರು ಹಾಗೂ ಯಕ್ಷಗಾನ ಕಲಾವಿದರಾದ ಶ್ರೀ ಬಂಗಾರ್ ಆಚಾರ್, ಕೆರೆ ನಿರ್ಮಾತೃ ಕಲ್ಮನೆ ಕಾಮೇಗೌಡ ಹಾಗೂ ವೇದಾಂತ ವಿದ್ವಾನ್ ಶ್ರೀ ಆರ್.ಎಲ್.ಕಶ್ಯಪ್ ಇವರುಗಳ ನಿಧನದ ಬಗ್ಗೆ**

---

**ಸಭಾಪತಿಯವರು:-** ಹಾಲಿ ವಿಧಾನ ಸಭೆಯ ಶಾಸಕರು ಹಾಗೂ ಉಪ ಸಭಾಧ್ಯಕ್ಷರಾದ ಶ್ರೀ ಆನಂದ ಮಾಮನಿ, ವಿಧಾನ ಪರಿಷತ್ತಿನ ಮಾಜಿ ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಜಬ್ಬಾರ್ ಖಾನ್ ಹೊನ್ನಳ್ಳಿ, ವಿಧಾನ ಪರಿಷತ್ತಿನ ಮಾಜಿ ಶಾಸಕರಾದ ಶ್ರೀ ಎಸ್.ಎಸ್.ಪೂಜಾರಿ, ವಿಧಾನ ಸಭೆಯ ಮಾಜಿ ಸದಸ್ಯರು ಹಾಗೂ ಮಾಜಿ ಸಚಿವರಾದ ಶ್ರೀ ಸುಧೀಂದ್ರರಾವ್ ಕಸಬೆ, ಲೋಕಸಭೆ ಮಾಜಿ ಸದಸ್ಯರಾದ ಶ್ರೀ ಕೋಳೂರು ಬಸನಗೌಡ, ರಾಜ್ಯಸಭಾ ಮಾಜಿ ಸದಸ್ಯರಾದ ಶ್ರೀ ಅಬ್ದುಲ್ ಸಮದ್ ಸಿದ್ದಿಖಿ, ಕನ್ನಡ ಚಲನಚಿತ್ರ ರಂಗದ ನಟರು ಹಾಗೂ ನಾಟಕಕಾರರಾದ ಶ್ರೀ ಲೋಹಿತಾಶ್ವ, ಭಾಗವತರು ಹಾಗೂ ಯಕ್ಷಗಾನ ಕಲಾವಿದರಾದ ಶ್ರೀ ಬಂಗಾರ್ ಆಚಾರ್, ಕೆರೆ ನಿರ್ಮಾತೃ ಕಲ್ಮನೆ ಕಾಮೇಗೌಡ ಹಾಗೂ ವೇದಾಂತ ವಿದ್ವಾನ್ ಶ್ರೀ ಆರ್.ಎಲ್.ಕಶ್ಯಪ್ ಇವರುಗಳು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

## 01. ಆನಂದ ಮಾಮನಿ

ಹಾಲಿ ವಿಧಾನ ಸಭೆಯ ಶಾಸಕರು ಹಾಗೂ ಉಪ ಸಭಾಧ್ಯಕ್ಷರಾದ ಶ್ರೀ ಆನಂದ ಮಾಮನಿ ಅವರು ದಿನಾಂಕ 23.10.2022ರಂದು ನಿಧನ ಹೊಂದಿರುತ್ತಾರೆ.

1966ರ ಜನವರಿ, 18ರಂದು ಜನಿಸಿದ್ದ ಶ್ರೀಯುತರು ಬಿ.ಕಾಂ., ಪದವೀಧರರಾಗಿದ್ದರು. "ಹತ್ತಿಯ ಕೇಂದ್ರ" ಎಂದು ಗುರುತಿಸಿಕೊಂಡಿದ್ದ ಸವದತ್ತಿ ಭಾಗದಲ್ಲಿ ಆರಂಭದಲ್ಲಿ ಹತ್ತಿ ವ್ಯಾಪಾರದಲ್ಲಿ ತೊಡಗಿಕೊಂಡಿದ್ದ ಶ್ರೀಯುತರು 2008, 2013 ಹಾಗೂ 2018ರಲ್ಲಿ ಸವದತ್ತಿ ವಿಧಾನಸಭಾ ಕ್ಷೇತ್ರದಿಂದ ಸತತವಾಗಿ ಮೂರು ಬಾರಿ ಆಯ್ಕೆಯಾಗಿರುತ್ತಾರೆ. ಅಭಿವೃದ್ಧಿ ದೃಷ್ಟಿಕೋನ ಮತ್ತು ರೈತರಪರ ಕಾಳಜಿ ಹೊಂದಿದ್ದ ಶ್ರೀಯುತರು 2020ರಲ್ಲಿ ವಿಧಾನ ಸಭೆ ಉಪ ಸಭಾಧ್ಯಕ್ಷರಾಗಿ ಆಯ್ಕೆಯಾಗಿದ್ದರು.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಸರಳ ಸಜ್ಜನಿಕೆಯ ಸೌಮ್ಯ ಸ್ವಭಾವದ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

## 02. ಜಬ್ಬಾರ್ ಖಾನ್ ಹೊನ್ನಳ್ಳಿ

ವಿಧಾನ ಪರಿಷತ್ತಿನ ಮಾಜಿ ಶಾಸಕರು ಹಾಗೂ ಮಾಜಿ ಸಚಿವರಾಗಿದ್ದ ಶ್ರೀ ಜಬ್ಬಾರ್ ಖಾನ್ ಹೊನ್ನಳ್ಳಿ ಅವರು ದಿನಾಂಕ 07.10.2022ರಂದು ನಿಧನ ಹೊಂದಿರುತ್ತಾರೆ.

1942 ಮಾರ್ಚ್, 01ರಂದು ಜನಿಸಿದ್ದ ಶ್ರೀಯುತರು ಬಿ.ಎ., ಬಿ.ಎಡ್., ಎಲ್.ಎಲ್.ಬಿ., ಪದವೀಧರರಾಗಿದ್ದು, ಎರಡು ಬಾರಿ ಹುಬ್ಬಳ್ಳಿಯ ಅಂಜುಮನ್ ಇಸ್ಲಾಂ ಸಂಸ್ಥೆಯ ಅಧ್ಯಕ್ಷರಾಗಿದ್ದರು. ಶ್ರೀಯುತರು 1989ರಲ್ಲಿ ವಿಧಾನ ಪರಿಷತ್ತಿಗೆ ನಾಮನಿರ್ದೇಶನಗೊಂಡಿದ್ದರು. 1996ರಿಂದ ಮಾಡಲ್ ಉರ್ದು ಪ್ರೌಢಶಾಲೆಯಲ್ಲಿ 18 ವರ್ಷ ಶಿಕ್ಷಕರಾಗಿ ನಂತರ 1999 ಮತ್ತು 2007ರಲ್ಲಿ ಹುಬ್ಬಳ್ಳಿ ನಗರ ವಿಧಾನ ಸಭಾ ಕ್ಷೇತ್ರದಿಂದ ಎರಡು ಬಾರಿ ವಿಧಾನಸಭಾ ಶಾಸಕರಾಗಿ ಧರ್ಮಸಿಂಗ್ ಅವರ ಸಚಿವ ಸಂಪುಟದಲ್ಲಿ ಕ್ರೀಡಾ ಮತ್ತು ಯುವಜನ ಸಚಿವರಾಗಿಯೂ ಸೇವೆ ಸಲ್ಲಿಸಿರುತ್ತಾರೆ. ಸಚಿವರಾಗಿ,

ಶಾಸಕರಾಗಿ ಹುಬ್ಬಳ್ಳಿ-ಧಾರವಾಡ ಅವಳಿ ನಗರದ ಅಭಿವೃದ್ಧಿ, ಶಾಂತಿ ಸೌಹಾರ್ದತೆ ಕಾಪಾಡುವಲ್ಲಿ ಮಹತ್ವದ ಪಾತ್ರ ವಹಿಸಿದ್ದು, ಶ್ರೀಯುತರನ್ನು ಜನರು ಪ್ರೀತಿಯಿಂದ "ಜನಾಬ್" ಎಂದು ಕರೆಯುತ್ತಿದ್ದರು.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಸರಳ ಸಜ್ಜನಿಕೆಯ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

**೦೩. ಎಸ್.ಎಸ್.ಪೂಜಾರಿ**

ವಿಧಾನ ಪರಿಷತ್ತಿನ ಮಾಜಿ ಶಾಸಕರಾದ ಶ್ರೀ ಎಸ್.ಎಸ್.ಪೂಜಾರಿ ಅವರು ದಿನಾಂಕ 06.11.2022 ರಂದು ನಿಧನ ಹೊಂದಿರುತ್ತಾರೆ.

1934ರ ಆಗಸ್ಟ್, 28ರಂದು ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಸಂಕೇಶ್ವರದಲ್ಲಿ ಜನಿಸಿದ್ದ ಶ್ರೀಯುತರು ಎಂ.ಎ., ಬಿ.ಎಡ್., ಪದವೀಧರರಾಗಿದ್ದು, 1998 ರಿಂದ 2004ರ ಅವಧಿಯಲ್ಲಿ ಶಿಕ್ಷಕರ ಕ್ಷೇತ್ರದಿಂದ ಸ್ವತಂತ್ರ ಅಭ್ಯರ್ಥಿಯಾಗಿ ವಿಧಾನ ಪರಿಷತ್ತಿಗೆ ಆಯ್ಕೆಯಾಗಿರುತ್ತಾರೆ. ಶಿಕ್ಷಕ ವಿರೋಧಿ ನೀತಿಗಳ ಕುರಿತು ಸರ್ಕಾರದ ಗಮನ ಸೆಳೆಯುವಲ್ಲಿ ಮಹತ್ವದ ಪಾತ್ರ ವಹಿಸಿದ್ದ ಶ್ರೀಯುತರು ಶಿಕ್ಷಕರು ಮತ್ತು ಶಿಕ್ಷಣ ಕ್ಷೇತ್ರದ ಬಗ್ಗೆ ಅಪಾರ ಕಾಳಜಿ ಹೊಂದಿದ್ದರು.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಸರಳ ಸಜ್ಜನಿಕೆಯ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

**(ಮುಂದು)**

(1040)19.12.2022/11.20/ಎಂಎಂ-ಜಿಆರ್

**4. ಸುಧೀಂದ್ರರಾವ್ ಕಸಬೆ**

ವಿಧಾನಸಭೆಯ ಮಾಜಿ ಶಾಸಕರು ಹಾಗೂ ಮಾಜಿ ಸಚಿವರಾದ ಸುಧೀಂದ್ರರಾವ್ ಕಸಬೆ ಅವರು ದಿನಾಂಕ: 22.10.2022ರಂದು ನಿಧನ ಹೊಂದಿರುತ್ತಾರೆ.

1947ರ ಜನವರಿ, 26ರಂದು ಜನಿಸಿದ್ದ ಶ್ರೀಯುತರು ವೃತ್ತಿಯಲ್ಲಿ ಕೃಷಿಕರಾಗಿದ್ದರು. ಎಸ್.ಎಸ್.ಎಲ್.ಸಿ.ವರೆಗೆ ವಿದ್ಯಾಭ್ಯಾಸ ಮಾಡಿದ್ದು, 1978 ಹಾಗೂ 1983ರಲ್ಲಿ ಕಲ್ಮಲಾ ವಿಧಾನ ಸಭಾ ಕ್ಷೇತ್ರದಿಂದ ಎರಡು ಬಾರಿ ಆಯ್ಕೆಯಾಗಿದ್ದು, 1980ರಲ್ಲಿ ಆರ್. ಗುಂಡುರಾವ್ ಅವರ ಸಚಿವ ಸಂಪುಟದಲ್ಲಿ ಮುಜರಾಯಿ ಮತ್ತು ಕೃಷಿ ಮಾರುಕಟ್ಟೆ ಸಚಿವರಾಗಿ ಸೇವೆಯನ್ನು ಸಲ್ಲಿಸಿದ್ದ ಶ್ರೀಯುತರು ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದು, ಬಡವರು ಹಾಗೂ ಸಮಾಜದ ಹಿಂದುಳಿದ ವರ್ಗಗಳ ಸಬಲೀಕರಣಕ್ಕಾಗಿ ಶ್ರಮವಹಿಸಿದ್ದರು.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಸರಳ ಸಜ್ಜನಿಕೆಯ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

### 5. ಕೋಳೂರು ಬಸವನಗೌಡ

ಲೋಕಸಭೆಯ ಮಾಜಿ ಸದಸ್ಯರಾದ ಕೋಳೂರು ಬಸವನಗೌಡ ಅವರು ದಿನಾಂಕ: 25.11.2022ರಂದು ನಿಧನ ಹೊಂದಿರುತ್ತಾರೆ.

2000ರಲ್ಲಿ ನಡೆದ 13ನೇ ಲೋಕಸಭೆಗೆ ಬಳ್ಳಾರಿ ಕ್ಷೇತ್ರದ ಉಪ ಚುನಾವಣೆಯಲ್ಲಿ ಆಯ್ಕೆಯಾಗಿ 4 ವರ್ಷ ಸಂಸದರಾಗಿ ಕಾರ್ಯನಿರ್ವಹಿಸಿರುತ್ತಾರೆ. ಶಿಕ್ಷಣ ಕ್ಷೇತ್ರದಲ್ಲಿ ಗಣನೀಯ ಸೇವೆಯನ್ನು ಸಲ್ಲಿಸಿದ್ದ ಶ್ರೀಯುತರು ವೀರಶೈವ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾಗಿ ಹಾಗೂ 1980ರಲ್ಲಿ ವೀರಶೈವ ಎಂಜಿನಿಯರಿಂಗ್ ಕಾಲೇಜು ಸ್ಥಾಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಸರಳ ಸಜ್ಜನಿಕೆಯ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

### 6. ಅಬ್ದುಲ್ ಸಮದ್ ಸಿದ್ಧಿಖಿ

ರಾಜ್ಯಸಭೆಯ ಮಾಜಿ ಸದಸ್ಯರಾದ ಅಬ್ದುಲ್ ಸಮದ್ ಸಿದ್ಧಿಖಿ ಅವರು ದಿನಾಂಕ 21.11.2022ರಂದು ನಿಧನ ಹೊಂದಿರುತ್ತಾರೆ.

ರಾಯಚೂರು ನಗರಸಭೆಯ ಸದಸ್ಯರಾಗಿ ರಾಜಕೀಯ ವೃತ್ತಿ ಜೀವನ ಪ್ರಾರಂಭಿಸಿದ್ದ ಶ್ರೀಯುತರು 1988ರಿಂದ 1994ರವರೆಗೆ ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾಗಿ ಕಾರ್ಯನಿರ್ವಹಿಸಿರುತ್ತಾರೆ. ಅನೇಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ್ದ ಶ್ರೀಯುತರು ನ್ಯೂ ಎಜುಕೇಶನ್ ಸೊಸೈಟಿಯಡಿ ವಿಶೇಷವಾಗಿ ಪ್ರಾಥಮಿಕ, ಪ್ರೌಢ, ಪದವಿಪೂರ್ವ ಹಾಗೂ ಪದವಿ ಕಾಲೇಜುಗಳನ್ನು ಆರಂಭಿಸಿದ ಕೀರ್ತಿಗೆ ಭಾಜನರಾಗಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಸರಳ ಸಜ್ಜನಿಕೆಯ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

**7. ಟಿ.ಎಸ್. ಲೋಹಿತಾಶ್ವ**

ಕನ್ನಡ ಚಲನಚಿತ್ರ ರಂಗದ ನಟರು ಹಾಗೂ ನಾಟಕಕಾರರಾದ ಟಿ.ಎಸ್. ಲೋಹಿತಾಶ್ವ ಅವರು ದಿನಾಂಕ: 08.11.2022ರಂದು ನಿಧನ ಹೊಂದಿರುತ್ತಾರೆ.

1942ರ ಆಗಸ್ಟ್, 05ರಂದು ತುಮಕೂರು ಜಿಲ್ಲೆಯ ತೊಂಡನಗೆರೆ ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ಮೈಸೂರಿನ ಮಾನಸಗಂಗೋತ್ರಿಯಲ್ಲಿ ಆಂಗ್ಲ ಭಾಷೆಯಲ್ಲಿ ಎಂ.ಎ ಪದವೀಧರರಾಗಿದ್ದು, 33 ವರ್ಷಗಳ ಕಾಲ ಇಂಗ್ಲಿಷ್ ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿಸಿರುತ್ತಾರೆ. ರಂಗನಾಟಕ ಮತ್ತು ದೂರದರ್ಶನದ ಧಾರವಾಹಿಗಳಲ್ಲೂ ನಟಿಸಿದ್ದು ರಂಗಭೂಮಿ ಮೂಲಕ ಸಿನಿಮಾ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿರುತ್ತಾರೆ. ಆರಂಭದಲ್ಲಿ ಕಲಾತ್ಮಕ ಚಿತ್ರಗಳಲ್ಲಿ ಬಣ್ಣ ಹಚ್ಚುತ್ತಿದ್ದ ಶ್ರೀಯುತರು ಶಂಕರ್‌ನಾಗ್ ಅವರ "ಗೀತಾ" ಚಲನಚಿತ್ರದಿಂದ ನಟರಾಗಿ ಗುರುತಿಸಿಕೊಂಡಿದ್ದರು.

ಧರ್ಮ, ದಾರಿತಪ್ಪಿತು, ಗಜೇಂದ್ರ ಹಾಗೂ ಸಾಂಗ್ಲಿಯಾನ ಸೇರಿ ಸುಮಾರು 500 ಹೆಚ್ಚು ಚಲನಚಿತ್ರಗಳಲ್ಲಿ ನಟಿಸಿದ್ದ ಶ್ರೀಯುತರು ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಹಾಗೂ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳಿಗೆ ಭಾಜನರಾಗಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ರಾಜ್ಯವು ರಂಗಕರ್ಮಿ ಹಾಗೂ ಕನ್ನಡ ಚಲನಚಿತ್ರದ ಹಿರಿಯ ನಟರೊಬ್ಬರನ್ನು ಕಳೆದುಕೊಂಡಂತಾಗಿದೆ.

## 8. ಬಂಗಾರ ಆಚಾರ್

ಭಾಗವತರು ಹಾಗೂ ಯಕ್ಷಗಾನ ಕಲಾವಿದರಾದ ಬಂಗಾರ್ ಆಚಾರ್ ಅವರು ದಿನಾಂಕ: 29.9.2022ರಂದು ನಿಧನ ಹೊಂದಿರುತ್ತಾರೆ.

ಭಾಗವತರಾಗಿ ಗುರುತಿಸಿಕೊಂಡಿದ್ದ ಶ್ರೀಯುತರು ಮದ್ದಳೆ ವಾದಕರೂ ಆಗಿದ್ದು, ಗೊಂಬೆ ಕುಣಿಸುವುದರಲ್ಲೂ ಪರಿಣಿತಿ ಹೊಂದಿರುತ್ತಾರೆ. ಕುಲ ಕಸುಬಾದ ಮರದ ಕೆಲಸವನ್ನೂ ಮಾಡುತ್ತಿದ್ದ ಶ್ರೀಯುತರು ತಂದೆಯವರಿಂದ ಯಕ್ಷಗಾನ ಕಲಿತು ಸುಮಾರು 62 ವರ್ಷಗಳಿಂದ ಕಬ್ಬಳ್ಳಿಯಲ್ಲಿ ಪ್ರತಿ ವರ್ಷ ಸ್ಥಳೀಯರಿಗೆ ಯಕ್ಷಗಾನ ತರಬೇತಿ ಕೊಟ್ಟು ಮೂಡಲಪಾಯ ಯಕ್ಷಗಾನ ಪ್ರದರ್ಶನ ನೀಡುತ್ತಾ ಬಂದಿದ್ದರು.

ಯಕ್ಷಗಾನ ಕ್ಷೇತ್ರದ ಜೀವಮಾನದ ಸಾಧನೆಗಾಗಿ ಶ್ರೀಯುತರಿಗೆ 2019ರಲ್ಲಿ ಕರ್ನಾಟಕ ಯಕ್ಷಗಾನ ಅಕಾಡೆಮಿಯು ಪಾರ್ತಿಸುಬ್ಬ ಪ್ರಶಸ್ತಿ ಹಾಗೂ 2020ನೇ ಸಾಲಿನ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿರುತ್ತದೆ. ಕರ್ನಾಟಕ ಜಾನಪದ ಪರಿಷತ್ತಿನ ಜಾನಪದ ಲೋಕ ಪ್ರಶಸ್ತಿಗೆ ಭಾಜನರಾಗಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಒಬ್ಬ ಹಿರಿಯ ಯಕ್ಷಗಾನ ಕಲಾವಿದರೊಬ್ಬರನ್ನು ಕಳೆದುಕೊಂಡಂತಾಗಿದೆ.

## 9. ಕಲ್ಮನೆ ಕಾಮೇಗೌಡ

ಆಧುನಿಕ ಭಗೀರಥ, ಕೆರೆ ನಿರ್ಮಾತೃ ಕಲ್ಮನೆ ಕಾಮೇಗೌಡ ಅವರು ದಿನಾಂಕ: 17.10.2022ರಂದು ನಿಧನ ಹೊಂದಿರುತ್ತಾರೆ.

ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ದಾಸನದೊಡ್ಡಿ ಗ್ರಾಮದ ಬಳಿಯಿರುವ ಕುಂದನಿ ಬೆಟ್ಟದಲ್ಲಿ ಕುರಿಗಾಹಿಯಾಗಿದ್ದ ಶ್ರೀಯುತರು ಕುರಿ ಮಾರಿ ಸಂಪಾದಿಸಿದ ಹಣದಲ್ಲಿ ಬೆಟ್ಟದ ಮೇಲೆ ಕಟ್ಟೆಗಳನ್ನು ಕಟ್ಟುವ ಮೂಲಕ 'ಕಟ್ಟೆ ಕಾಮೇಗೌಡ' ಎಂದೇ ಪ್ರಸಿದ್ಧಿ ಪಡೆದಿದ್ದರು. ತಮ್ಮ ಸ್ವಂತ

ಹಣದಲ್ಲಿ ಸುಮಾರು 16ಕ್ಕೂ ಹೆಚ್ಚು ಕೆರೆ ಕಟ್ಟೆಗಳನ್ನು ನಿರ್ಮಿಸಿ ಆಧುನಿಕ ಭಗೀರಥ ಎಂದೇ ಖ್ಯಾತರಾಗಿದ್ದರು. ಬೆಟ್ಟದ ಮಧ್ಯ ಹಾಗೂ ತಪ್ಪಲಲ್ಲಿ 2000ಕ್ಕೂ ಹೆಚ್ಚು ಗಿಡಗಳನ್ನು ನೆಟ್ಟು ಬೆಳೆಸುವ ಮೂಲಕ ಪರಿಸರ ಕಾಳಜಿಯನ್ನು ವಹಿಸಿದ್ದರು. ಇವರ ನಿಸ್ವಾರ್ಥ ಸೇವೆಯಿಂದಾಗಿ ಪ್ರಾಣಿ, ಪಕ್ಷಿಗಳಿಗೆ ಬೇಸಿಗೆ ಕಾಲದಲ್ಲೂ ನೀರು ದೊರೆಯುವಂತೆ ಮಾಡಿ ಅಂತರ್ಜಲ ವೃದ್ಧಿಗೂ ಕಾರಣಕರ್ತರಾಗಿರುತ್ತಾರೆ.

ತಮ್ಮ ಜೀವಿತದ ಬಹುಪಾಲು ಅವಧಿಯನ್ನು ಕಟ್ಟೆಗಳ ನಿರ್ಮಾಣ, ಪರಿಸರ ಮತ್ತು ಅರಣ್ಯ ಸಂರಕ್ಷಣೆಗಾಗಿ ಮುಡುಪಾಗಿಟ್ಟಿದ್ದ ಶ್ರೀಯುತರ ಆದರ್ಶ ಸಮಾಜ ಸೇವೆಗಾಗಿ 2018ರಲ್ಲಿ ರಾಜ್ಯ ಸರ್ಕಾರವು ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡುವ ಮೂಲಕ ಗೌರವಿಸಿರುತ್ತದೆ. ರಮಾಗೋವಿಂದ ಪ್ರಶಸ್ತಿ ಸೇರಿದಂತೆ ಹಲವು ರಾಷ್ಟ್ರೀಯ ಮಟ್ಟದ ಹಾಗೂ ಅಂತರರಾಷ್ಟ್ರೀಯ ಮಟ್ಟದ ಪ್ರತಿಷ್ಠಿತ ಪ್ರಶಸ್ತಿಗಳಿಗೆ ಭಾಜನರಾಗಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಕೆರೆಗಳ ನಿರ್ಮಾತೃ ಹಾಗೂ ಪರಿಸರ ಸಂರಕ್ಷಕರೊಬ್ಬರನ್ನು ಕಳೆದುಕೊಂಡಂತಾಗಿದೆ.

## 10. ಡಾ: ಆರ್.ಎಲ್. ಕಶ್ಯಪ್

ವೇದಾಂತ ವಿದ್ವಾನ್ ಡಾ: ಆರ್.ಎಲ್. ಕಶ್ಯಪ್ ಅವರು ದಿನಾಂಕ 11.11.2022ರಂದು ನಿಧನ ಹೊಂದಿರುತ್ತಾರೆ.

ವೇದ ವಿಜ್ಞಾನದಲ್ಲಿ ಆಳವಾದ ಅಧ್ಯಯನ ನಡೆಸಿದ್ದ ಶ್ರೀಯುತರು ವೇದ ಮತ್ತು ವೇದಾಂಗದ ಪರಿಣಿತರಾಗಿ ವೇದಗಳನ್ನು ಆಂಗ್ಲ ಭಾಷೆಗೆ ಅನುವಾದಿಸಿದ್ದರು. ನಾಲ್ಕು ವೇದಗಳಿಗೆ ಭಾಷ್ಯ ಬರೆದು ಅವುಗಳನ್ನು ಕನ್ನಡ, ತಮಿಳು ಮತ್ತು ತೆಲಗು ಭಾಷೆಗಳಿಗೆ ಅನುವಾದ ಮಾಡಿದ್ದರು.

ಎಲೆಕ್ಟ್ರಿಕಲ್ ಮತ್ತು ಕಂಪ್ಯೂಟರ್ ಇಂಜಿನಿಯರ್ ವ್ಯಾಸಂಗ ಮಾಡಿದ್ದ ಶ್ರೀಯುತರು ಅಮೆರಿಕದ ಷಡ್ರ್ಯೂ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿರುತ್ತಾರೆ. ಅರವಿಂದೋ ಕಪಾಲಿ ಶಾಸ್ತ್ರಿ ಇನ್‌ಸ್ಟಿಟ್ಯೂಷನ್ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದ ಶ್ರೀಯುತರು ಮಷಿನ್ ಇಂಟಲಿಜೆನ್ಸ್ ಕ್ಷೇತ್ರದಲ್ಲಿ ಸಂಶೋಧನೆ ನಡೆಸಿರುತ್ತಾರೆ. ಪ್ರಾಧ್ಯಾಪಕರಾಗಿ 33 ವರ್ಷ ಸೇವೆ ಸಲ್ಲಿಸುವ ಮೂಲಕ 50

ಪಿಹೆಚ್‌ಡಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿದ್ದು. ಅಲ್ಲದೇ, ವಿಜ್ಞಾನ ನಿಯತಕಾಲಿಕೆಯಲ್ಲಿ 250ಕ್ಕೂ ಹೆಚ್ಚು ಲೇಖನಗಳನ್ನು ಪ್ರಕಟಿಸಿರುತ್ತಾರೆ.

ಆಧ್ಯಾತ್ಮಿಕ ಸಂಘಟನೆಯಾದ ಸಾಕ್ಷಿ ಟ್ರಸ್ಟ್‌ನ ಅಧ್ಯಕ್ಷರಾಗಿದ್ದ ಶ್ರೀಯುತರಿಗೆ ಕೇಂದ್ರ ಸರ್ಕಾರವು 2021ರಲ್ಲಿ ಪದ್ಮಶ್ರೀ ಪ್ರಶಸ್ತಿ ಮತ್ತು ರಾಜ್ಯ ಸರ್ಕಾರವು 2012ರಲ್ಲಿ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಿರುತ್ತದೆ.

ಶ್ರೀಯುತರ ನಿಧನದಿಂದಾಗಿ ರಾಜ್ಯವು ವೇದ ಮತ್ತು ವೇದಾಂಗದ ಪರಿಣಿತರೊಬ್ಬರನ್ನು ಕಳೆದುಕೊಂಡಂತಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯ ಉಪಸಭಾಧ್ಯಕ್ಷರಾಗಿದ್ದ ಶ್ರೀ ಆನಂದ ಮಾಮನಿಯವರ ಸಹಿತ 10 ಜನ ಗಣ್ಯರ ನಿಧನಕ್ಕೆ ತಾವು ಸಂತಾಪ ಸೂಚನೆಯನ್ನು ಮಂಡಿಸಿದ್ದೀರಿ. ಈ ಸಂತಾಪಕ್ಕೆ ಸರ್ಕಾರದ ಪರವಾಗಿ ಸಹಮತವನ್ನು ವ್ಯಕ್ತಪಡಿಸುತ್ತಾ, ವಿಧಾನಸಭೆಯಲ್ಲಿ ಉಪಾಧ್ಯಕ್ಷರಾಗಿದ್ದ ಶ್ರೀ ಆನಂದ ಮಾಮನಿಯವರು ಮೊನ್ನೆಯವರೆಗೂ ನಮ್ಮ ಜೊತೆ ಇದ್ದವರು. ಕಳೆದ ಮುಂಗಾರು ಅಧಿವೇಶನದಲ್ಲೂ ಕೂಡ ಅನಾರೋಗ್ಯದ ನಡುವೆಯೂ ನಮ್ಮ ಜೊತೆ ಕೆಲಸ ಮಾಡಿದ್ದರು. ಅವರ ನಿಧನದಿಂದಾಗಿ ರಾಜ್ಯದ ಜನತೆಯಲ್ಲಿ ಒಂದು ರೀತಿಯ ದಿಗ್ಭ್ರಮೆಯನ್ನು ಉಂಟು ಮಾಡಿದ್ದನ್ನು ನಾವೆಲ್ಲರೂ ಗಮನಿಸಿದ್ದೇವೆ. ಮಾಧ್ಯಮದವರು ಆನಂದ ಮಾಮನಿಯವರ ರಾಜಕೀಯ ಜೀವನದ ಬಗ್ಗೆ ಬರೆಯುತ್ತಾ ಹತ್ತಿ ವ್ಯಾಪಾರದಿಂದ ವಿಧಾನಸಭೆಯವರೆಗೆ ಒಬ್ಬ ವ್ಯಕ್ತಿ ಎಷ್ಟರಮಟ್ಟಿಗೆ ತನ್ನ ಶಕ್ತಿಯನ್ನು ಕ್ರೋಢೀಕರಿಸಿಕೊಂಡು ಸಮಾಜದಲ್ಲಿ ಬೆಳೆಯಬಹುದು ಎನ್ನುವುದಕ್ಕೆ ಆನಂದ ಮಾಮನಿಯವರು ಒಬ್ಬ ನಿದರ್ಶನ ಎಂದು ಉಲ್ಲೇಖ ಮಾಡಲಾಗಿತ್ತು. ಮೂರು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದ ಆನಂದ ಮಾಮನಿಯವರು ಕರ್ನಾಟಕ ವಿಧಾನಸಭೆಯ ಉಪಸಭಾಧ್ಯಕ್ಷರಾಗಿದ್ದು ಮಹತ್ತರವಾದಂತಹ ಮತ್ತು ಉತ್ತಮವಾದಂತಹ ಜನರ ಕೆಲಸಗಳನ್ನು ಮಾಡಿದವರು ಎನ್ನುವ ಗೌರವಕ್ಕೆ ಪಾತ್ರರಾಗಿದ್ದರು. ಕೇವಲ 56 ವರ್ಷಗಳ ಕಾಲ ಬದುಕಿ ಬಾಳಿದಂತಹ ಆನಂದ ಮಾಮನಿಯವರು ಕ್ಷೇತ್ರದ ಜನತೆಯಲ್ಲಿ ಅತ್ಯಂತ ಭಾವನಾತ್ಮಕವಾದ ಸಂಬಂಧವನ್ನು ಇಟ್ಟುಕೊಂಡಿದ್ದರು. ಕ್ರಿಯಾಶೀಲ ವ್ಯಕ್ತಿತ್ವವನ್ನು

ಬೆಳೆಸಿಕೊಂಡು ನೀರಾವರಿ ಬಗ್ಗೆ, ರೈತರ ಬಗ್ಗೆ ವಿಶೇಷವಾದ ಕಾಳಜಿಯಿಂದ ಕೆಲಸ ಮಾಡುವುದನ್ನು ನಾವೆಲ್ಲರೂ ಗಮನಿಸಿದ್ದೇವೆ. ಆಧ್ಯಾತ್ಮದ ಬಗ್ಗೆಯೂ ಕೂಡ ಅವರಿಗೆ ವಿಶೇಷವಾದಂತಹ ಆಸಕ್ತಿ ಇತ್ತು. ನಾನು ಧಾರ್ಮಿಕ ದತ್ತಿ ಸಚಿವನಾಗಿದ್ದಾಗ ಸವದತ್ತಿ ದೇವಸ್ಥಾನಕ್ಕೆ ಹೋಗಿದ್ದೆ. ಆ ದೇವಸ್ಥಾನದಲ್ಲಿರುವಂತಹ ಎಲ್ಲಾ ಸಮಸ್ಯೆಗಳನ್ನೂ ಪರಿಹಾರ ಮಾಡಿ ಭಕ್ತಾದಿಗಳಿಗೆ ಮತ್ತು ಸಾರ್ವಜನಿಕರಿಗೆ ಆ ಧಾರ್ಮಿಕ ಕೇಂದ್ರದಲ್ಲಿ ಯಾವ ರೀತಿ ಸೇವೆ ಸಲ್ಲಿಸಬೇಕೆನ್ನುವ ಬಗ್ಗೆ ಅವರು ತೋರಿಸಿಕೊಡುವಷ್ಟರ ಮಟ್ಟಿಗೆ ಬಹಳ ಕ್ರಿಯಾಶೀಲವಾದಂತಹ ಕೆಲಸಗಳನ್ನು ಮಾಡಿದ್ದರು. ಅವರ ನಿಧನದ ಸಂದರ್ಭದಲ್ಲಿ ಅವರ ಸುತ್ತಲಿದ್ದ ಅಭಿಮಾನಿಗಳು ಮತ್ತು ಕಾರ್ಯಕರ್ತರು ಹೇಳುವಂತೆ ಒಂದು ಸಲ ನೀವು ನನ್ನ ಹೆಸರಿಡಿದು ಕರೆಯಬೇಕೆನ್ನುವ ಅವರ ಆಸೆಯನ್ನು ಆ ನೋವಿನ ಮಧ್ಯೆ ಹೇಳುವಂತಹ ಧ್ವನಿಗಳಿದ್ದವು. ಇಡೀ ಕ್ಷೇತ್ರದ ಜನತೆಯಲ್ಲಿ ಬಹುಪಾಲು ಕಾರ್ಯಕರ್ತರನ್ನು ಮತ್ತು ಸಾರ್ವಜನಿಕರನ್ನು ಹೆಸರು ಹಿಡಿದು ಕರೆಯುವಂತಹ ನೆನಪಿನ ಶಕ್ತಿಯನ್ನು ಆನಂದ ಮಾಮನಿಯವರು ಉಳಿಸಿಕೊಂಡಿದ್ದರು ಮತ್ತು ಬೆಳೆಸಿಕೊಂಡಿದ್ದರು. ಅವರು ಮೂರು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರು. ಅವರ ತಂದೆಯವರು ಸಹ ಶಾಸಕರಾಗಿ ಉಪಸಭಾಧ್ಯಕ್ಷರಾಗಿದ್ದರಂತೆ. ಅದೇ ಮಾದರಿಯಲ್ಲಿ ಇವರು ಸಹ ಉಪಾಧ್ಯಕ್ಷರಾಗಿ ಕೆಲಸಗಳನ್ನು ಮಾಡಿ, ತಮ್ಮ ತಂದೆ ಕುಳಿತ ಕುರ್ಚಿಯಲ್ಲಿ ತಾನು ಕುಳಿತುಕೊಳ್ಳಲು ಅವಕಾಶವಾಗಿರುವುದು ತಮ್ಮ ಜೀವನದ ಸೌಭಾಗ್ಯವೆಂದು ಹೇಳಿದ್ದರು. ತುಂಬಾ ಜನಪರವಾದ ಕೆಲಸಗಳನ್ನು ಮಾಡಿ, ಮೂರು ಬಾರಿ ಶಾಸಕರಾಗಿದ್ದ ಆನಂದ ಮಾಮನಿಯವರಂತಹ ಹಿರಿಯರನ್ನು ಕಳೆದುಕೊಂಡು ಈ ರಾಜ್ಯ ಒಬ್ಬ ಯೋಗ್ಯ ರಾಜಕಾರಣಿಯನ್ನು, ಒಬ್ಬ ಬಡವರ ಬಂಧುವನ್ನು, ಒಬ್ಬ ರೈತರ ಒಡನಾಡಿಯನ್ನು, ಜನಸಾಮಾನ್ಯರ ಸಖನಾಗಿ ಕೆಲಸ ಮಾಡುವಂತಹ ಒಬ್ಬ ಯೋಗ್ಯ ಶಾಸಕರನ್ನು ಮತ್ತು ವಿಧಾನಸಭೆಯ ಉಪಾಧ್ಯಕ್ಷರನ್ನು ಕಳೆದುಕೊಂಡಿದೆ ಎಂದು ಅನಿಸುತ್ತದೆ. ಆ ಹಿನ್ನೆಲೆಯಲ್ಲಿ ತಾವು ದಿ: ಆನಂದ ಮಾಮನಿಯವರ ಹೆಸರಿನಲ್ಲಿ ಮಾಡಿರುವಂತಹ ಸಂತಾಪ ಸೂಚನೆಗೆ ಸರ್ಕಾರದ ಪರವಾಗಿ ಸಹಮತವನ್ನು ವ್ಯಕ್ತಪಡಿಸಿ ಅವರ ಬಂಧುಗಳು ಹಾಗೂ ಅವರ ಪತ್ನಿಗೆ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಆ ದೇವರು ಕೊಡಲಿ ಎಂಬ ಭಾವನೆಗಳನ್ನು ತಮ್ಮ ಮುಂದೆ ವ್ಯಕ್ತಪಡಿಸುತ್ತೇನೆ.

(1041) 19-12-2022 11-30 KH/GR (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಮುಂದು):**

ಮಾನ್ಯ ಸಭಾಪತಿಯವರೇ, ಮಾನ್ಯ ಜಬ್ಬಾರ್ ಖಾನ್ ಹೊನ್ನಳ್ಳಿ ಯವರ ಬಗ್ಗೆ ಉಲ್ಲೇಖ ಮಾಡಿದ್ದೀರಿ. 1989 ರಲ್ಲಿ ವಿಧಾನಪರಿಷತ್ತಿಗೆ ನಾಮನಿರ್ದೇಶನಗೊಂಡು, ಒಬ್ಬ ಶಿಕ್ಷಕರಾಗಿ ಕೆಲಸಗಳನ್ನು ಮಾಡಿ ಧರ್ಮಸಿಂಗ್ ಅವರ ಸಚಿವ ಸಂಪುಟದಲ್ಲಿ ಕ್ರೀಡಾ ಮತ್ತು ಯುವಜನ ಸಚಿವರಾಗಿ ಸೇವೆ ಸಲ್ಲಿಸಿರುವಂತಹ ಮಾನ್ಯ ಜಬ್ಬಾರ್ ಖಾನ್ ಹೊನ್ನಳ್ಳಿ ರವರು ಶಾಂತಿ ಮತ್ತು ಸೌಹಾರ್ದತೆಗೆ ಹೆಸರಾದಂತಹವರು. ಇವರು ಬಹಳ ಸಜ್ಜನರಾಗಿದ್ದರು ಎನ್ನುವಂತಹ ಭಾವನೆಗಳು ಇವೆ. ಇವರ ನಿಧನದಿಂದ ರಾಜ್ಯವು ಸರಳ ಸಜ್ಜನಿಕೆಯ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ ಎಂದು ಉಲ್ಲೇಖಿಸಬಹುದು.

ಮಾನ್ಯ ಎಸ್.ಎಸ್.ಪೂಜಾರಿಯವರ ಬಗ್ಗೆ ತಾವು ಉಲ್ಲೇಖ ಮಾಡಿದ್ದೀರಿ. 1998 ರಿಂದ 2004ರ ಅವಧಿಯಲ್ಲಿ ಶಿಕ್ಷಕರ ಕ್ಷೇತ್ರದಿಂದ ಸ್ವತಂತ್ರ ಅಭ್ಯರ್ಥಿಯಾಗಿ ವಿಧಾನ ಪರಿಷತ್ತಿಗೆ ಆಯ್ಕೆಯಾಗಿರುವಂತಹ ಮಾನ್ಯ ಎಸ್.ಎಸ್.ಪೂಜಾರಿಯವರು ಶಿಕ್ಷಕರ ಕ್ಷೇತ್ರದ ಜೊತೆಯಲ್ಲಿಯೇ ಬಡವರ ಕಲ್ಯಾಣದ ಯೋಜನೆಯ ಬಗ್ಗೆ ಅನೇಕ ವಿಚಾರಗಳನ್ನು ಉಲ್ಲೇಖ ಮಾಡಿ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದರು. ಶಿಕ್ಷಣದ ಬಗ್ಗೆ ಮತ್ತು ಶಿಕ್ಷಕರ ಬಗ್ಗೆ ವಿಶೇಷವಾದ ಕಾಳಜಿಯಿಂದ ಕೆಲಸಗಳನ್ನು ಮಾಡುತ್ತಿದ್ದರು ಎನ್ನುವುದನ್ನು ಉಲ್ಲೇಖ ಮಾಡಿದ್ದೀರಿ. ಒಬ್ಬ ಯೋಗ್ಯ ರಾಜಕಾರಣಿಯನ್ನು ಕಳೆದುಕೊಂಡಂತಹ ಅನುಭವ ಕರ್ನಾಟಕಕ್ಕೆ ಆಗಿದೆ ಎನ್ನುವುದಕ್ಕೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ.

ಮಾನ್ಯ ಸುಧೀಂದ್ರರಾವ್ ಕಸಬೆ ಯವರು ಮಾನ್ಯ ಆರ್.ಗುಂಡುರಾವ್ ಅವರ ಸಚಿವ ಸಂಪುಟದಲ್ಲಿ ಮುಜರಾಯಿ ಮತ್ತು ಕೃಷಿ ಮಾರುಕಟ್ಟೆ ಸಚಿವರಾಗಿ ಕೆಲಸಗಳನ್ನು ಮಾಡಿದ್ದು, ಹಿಂದುಳಿದ ವರ್ಗಗಳ ಸಬಲೀಕರಣಕ್ಕಾಗಿ ಮಾನ್ಯ ಸುಧೀಂದ್ರರಾವ್ ಕಸಬೆಯವರು ಶ್ರಮವಹಿಸಿ

ದುಡಿದಿದ್ದರು ಎನ್ನುವಂತಹ ಉಲ್ಲೇಖ ಇದೆ. ಹಿಂದುಳಿದ ವರ್ಗಗಳ ಬಗ್ಗೆ ಮತ್ತು ಕೃಷಿಕರ ಬಗ್ಗೆ ಕೆಲಸಗಳನ್ನು ಮಾಡಿದಂತಹ ಒಬ್ಬ ಹಿರಿಯ ರಾಜಕಾರಣಿಯನ್ನು ಕಳೆದುಕೊಂಡಿದ್ದೇವೆ ಎಂದೆನಿಸುತ್ತದೆ.

ಮಾನ್ಯ ಕೋಳೂರು ಬಸವನಗೌಡರವರ ಬಗ್ಗೆ ತಮ್ಮ ಉಲ್ಲೇಖ ಇದೆ. 2000ರಲ್ಲಿ ನಡೆದ 13ನೇ ಲೋಕಸಭೆಗೆ ಬಳ್ಳಾರಿ ಕ್ಷೇತ್ರದ ಉಪ ಚುನಾವಣೆಯಲ್ಲಿ ಆಯ್ಕೆಯಾಗಿ 4 ವರ್ಷಗಳ ಕಾಲ ಸಂಸದರಾಗಿ ಸೇವೆಯನ್ನು ಸಲ್ಲಿಸಿ, ಶಿಕ್ಷಣ ಕ್ಷೇತ್ರದಲ್ಲಿ ಗಣನೀಯವಾದಂತಹ ಕೆಲಸಗಳನ್ನು ಮಾಡಿ, ಎಂಜನಿಯರಿಂಗ್ ಕಾಲೇಜುಗಳನ್ನು ಸ್ಥಾಪನೆ ಮಾಡಿದಂತಹ ಹಿರಿಯರಾಗಿರುವ ಲೋಕಸಭೆಯ ಮಾಜಿ ಸದಸ್ಯರಾಗಿರುವಂತಹ ಮಾನ್ಯ ಕೋಳೂರು ಬಸವನಗೌಡ ರವರ ನಿಧನಕ್ಕೆ ತಾವು ಸೂಚಿಸಿರುವಂತಹ ಸಂತಾಪಕ್ಕೆ ನಾನು ಸಹಮತವನ್ನು ವ್ಯಕ್ತಪಡಿಸುತ್ತೇನೆ.

ರಾಜ್ಯ ಸಭೆಯ ಮಾಜಿ ಸದಸ್ಯರಾದ ಮಾನ್ಯ ಅಬ್ದುಲ್ ಸಮದ್ ಸಿದ್ಧಿಖಿರವರು ರಾಯಚೂರು ನಗರಸಭೆಯ ಸದಸ್ಯರಾಗಿ ಆಯ್ಕೆಯಾಗಿ ರಾಜಕೀಯ ವೃತ್ತಿ ಜೀವನವನ್ನು ಪ್ರಾರಂಭ ಮಾಡಿ, ನಗರ ಸಭೆಯಿಂದ ರಾಜ್ಯ ಸಭೆಯವರೆಗೆ ತನ್ನ ರಾಜಕಾರಣದ ಬದುಕನ್ನು ಬೆಳೆಸಿಕೊಂಡು, ಪ್ರೌಢ ಮತ್ತು ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸುವುದು ಮಾತ್ರವಲ್ಲದೇ ಅನೇಕ ಬಡವರಿಗೆ ಸಹಾಯ ಮಾಡಿದಂತಹ ಉದಾಹರಣೆಗಳನ್ನು ಉಲ್ಲೇಖ ಮಾಡಿದ್ದೀರಿ. ಇವರ ನಿಧನದ ಸಂತಾಪಕ್ಕೆ ಸರ್ಕಾರದ ಪರವಾಗಿ ಸಹಮತವನ್ನು ವ್ಯಕ್ತಪಡಿಸುತ್ತೇನೆ.

ಮಾನ್ಯ ಟಿ.ಎಸ್.ಲೋಹಿತಾಶ್ವ ರವರು ಕನ್ನಡ ಚಲನಚಿತ್ರ ರಂಗದಲ್ಲಿ ಒಬ್ಬ ಒಳ್ಳೆಯ ನಾಟಕ ಕಲಾವಿದ ಮತ್ತು ರಂಗ ಕಲಾವಿದ ಹಾಗೂ ಸಿನಿಮಾ ಕ್ಷೇತ್ರಕ್ಕೂ ಪಾದರ್ಪಣೆ ಮಾಡಿ, ಶ್ರೀಯುತ ಶಂಕರ್‌ನಾಗ್ ರವರ "ಗೀತಾ" ಚಲನಚಿತ್ರದಲ್ಲಿ ನಟರಾಗಿ ಅಭಿನಯಿಸಿದ್ದಾರೆ ಎನ್ನುವುದನ್ನು ತಾವು ಉಲ್ಲೇಖ ಮಾಡಿದ್ದೀರಿ. ಇವರು ಸಾಂಗ್ಲಿಯಾನ ಸೇರಿದಂತೆ ಇನ್ನು ಅನೇಕ ಚಿತ್ರಗಳಲ್ಲಿ ನಟಿಸಿದ್ದಾರೆ. ಇವರು ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಮತ್ತು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ರಾಜ್ಯವು ಬಸವೇಶ್ವರ ರಂಗಕರ್ಮಿಯನ್ನು ಮತ್ತು ಒಬ್ಬ ಸಿನಿಮಾ ನಟರೊಬ್ಬರನ್ನು ಹಾಗೂ ನಾಟಕ ಕಲಾವಿದರೊಬ್ಬರನ್ನು ಕಳೆದುಕೊಂಡಂತಹ ಅನುಭವಗಳಾಗಿವೆ.

ಯಕ್ಷಗಾನ ಕಲಾವಿದರಾದ ಮಾನ್ಯ ಬಂಗಾರ ಆಚಾರ್ ರವರ ನಿಧನದ ಬಗ್ಗೆ ತಾವು ಉಲ್ಲೇಖ ಮಾಡಿದ್ದೀರಿ. ಭಾಗವತರಾಗಿ ಗುರುತಿಸಿಕೊಂಡಿದ್ದ ಶ್ರೀಯುತರು ಮದ್ದಳೆ ವಾದಕರ ವಿಚಾರದಲ್ಲಿ ತುಂಬಾ ಅಧ್ಯಯನ ಮಾಡಿ ಅನುಭವ ಪಡೆದುಕೊಂಡು, ಸುಮಾರು 62 ವರ್ಷಗಳಿಂದ ಕಬ್ಬಳ್ಳಿಯಲ್ಲಿ ಪ್ರತಿ ವರ್ಷ ಸ್ಥಳೀಯರಿಗೆ ಯಕ್ಷಗಾನದ ತರಬೇತಿಯನ್ನು ಕೊಟ್ಟು, ಮೂಡಲಪಾಯ ಯಕ್ಷಗಾನ ಪ್ರದರ್ಶನ ನೀಡುತ್ತಾ ಬಂದಂತಹ ಹಿರಿಯರೊಬ್ಬರಾಗಿದ್ದರು. ಇಂತಹ ಮಾನ್ಯ ಬಂಗಾರ ಆಚಾರ್‌ರವರಿಗೆ ಪಾರ್ತಿಸುಬ್ಬ ಪ್ರಶಸ್ತಿ ಹಾಗೂ ರಾಜ್ಯೋತ್ಸವ ಪ್ರಶಸ್ತಿಯನ್ನು ಕೂಡ ಕೊಡಲಾಗಿತ್ತು. ಕರ್ನಾಟಕ ಜಾನಪದ ಪರಿಷತ್ತಿನ ಜಾನಪದ ಲೋಕದಲ್ಲಿ ಅತ್ಯಂತ ದೊಡ್ಡ ಗೌರವಕ್ಕೆ ಪಾತ್ರರಾಗಿದ್ದರು. ಮಾನ್ಯ ಬಂಗಾರ ಆಚಾರ್‌ರವರ ನಿಧನಕ್ಕೆ ಸರ್ಕಾರದ ಪರವಾಗಿ ಸಂತಾಪವನ್ನು ಸಲ್ಲಿಸುತ್ತೇನೆ.

ಮಾನ್ಯ ಕಲ್ಮನೆ ಕಾಮೇಗೌಡರವರು ವಿಶಿಷ್ಟವಾಗಿರುವಂತಹ ವ್ಯಕ್ತಿತ್ವವನ್ನು ಬೆಳೆಸಿಕೊಂಡವರಾಗಿದ್ದಾರೆ. ಇವರನ್ನು ಆಧುನಿಕ ಭಗೀರಥ ಎಂದು ಕರೆದರು. ಕೆರೆ ನಿರ್ಮಾಣ ಮಾಡಿದಂತಹ ಕಲ್ಮನೆ ಕಾಮೇಗೌಡರವರು ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ದಾಸನದೊಡ್ಡಿ ಗ್ರಾಮದ ಬಳಿಯಿರುವ ಬೆಟ್ಟದಲ್ಲಿ ಕುರಿಗಾಹಿಯಾಗಿದ್ದರು. ಇವರ ಬದುಕು ಕುರಿಗಳನ್ನು ಮಾರಿ ಬದುಕುವಂತಹ ಜೀವನವನ್ನು ಕಟ್ಟಿಕೊಂಡಿದ್ದರು. ಅವರು ಬೆಟ್ಟದ ಮೇಲೆ 16 ಕ್ಕೂ ಹೆಚ್ಚು ಕೆರೆ ಕಟ್ಟೆಗಳನ್ನು ಕಟ್ಟಿರುವಂತಹ ಕಾರಣಕ್ಕೆ ಅಲ್ಲಿನ ಜನರು ಇವರನ್ನು "ಕಟ್ಟೆ ಕಾಮೇಗೌಡ" ಎನ್ನುವ ಹೆಸರಿನಿಂದ ಕರೆಯುತ್ತಿದ್ದುದರಿಂದ ಆ ಹೆಸರಿನಿಂದಲೇ ಅವರು ಪ್ರಸಿದ್ಧರಾಗಿದ್ದರು. ಇವರು 16 ಕ್ಕೂ ಕೆರೆಗಳನ್ನು ನಿರ್ಮಾಣ ಮಾಡಿರುವುದಲ್ಲದೆ, 2000ಕ್ಕೂ ಹೆಚ್ಚು ಗಿಡಗಳನ್ನು ಬೆಳೆಸುವ ಮೂಲಕ ಪರಿಸರ ಕಾಳಜಿಯನ್ನು ಸಹ ವಹಿಸಿದ್ದರು. ಅವರ ಕೆರೆ ಕಟ್ಟೆಗಳ ಮೂಲಕ ಪ್ರಾಣಿ, ಪಕ್ಷಿಗಳಿಗೆ ಅಪಾರವಾದಂತಹ ಅವಕಾಶ ಕೊಟ್ಟಂತಾಗುತ್ತದೆ. ಇದರಿಂದ ಅಂತರ್ಜಲ ವೃದ್ಧಿಗೂ ಅನುಕೂಲಗಳಾಗುತ್ತದೆ. ತಮ್ಮ ಜೀವಿತದ ಬಹುಪಾಲು ಅವಧಿಯನ್ನು ಕೆರೆ-ಕಟ್ಟೆಗಳನ್ನು ನಿರ್ಮಾಣ ಮಾಡುವುದಕ್ಕೆ, ಪರಿಸರ ಮತ್ತು ಅರಣ್ಯವನ್ನು ಉಳಿಸುವುದಕ್ಕೆ ಮೀಸಲಿಟ್ಟು ಆದರ್ಶ ಸಮಾಜ ಸೇವೆಗಾಗಿ ಕೆಲಸ ಮಾಡಿರುವಂತಹ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು ಕೊಟ್ಟಿದೆ. ಹಾಗೆಯೇ "ರಮಾಗೋವಿಂದ" ಪ್ರಶಸ್ತಿ ಇವರ ಮಡಿಲಿಗೆ ಸೇರಿದೆ.

ಅಂತರ್ರಾಷ್ಟ್ರೀಯ ಮಟ್ಟದ ಅನೇಕ ಪ್ರಶಸ್ತಿಗಳು ಸಹ ಇವರಿಗೆ ಸಿಕ್ಕಿವೆ. ಎಲ್ಲಕ್ಕಿಂತ ಹೆಚ್ಚಾಗಿ ಪ್ರಧಾನ ಮಂತ್ರಿಯಾದ ಸನ್ಮಾನ್ಯ ನರೇಂದ್ರ ಮೋದಿಯವರು ತಮ್ಮ "ಮನ್ ಕಿ ಬಾತ್" ಕಾರ್ಯಕ್ರಮದಲ್ಲಿ ಕಲ್ಮನೆ ಕಾಮೇಗೌಡ ಅಂದರೆ ಕಟ್ಟೆ ಕಾಮೇಗೌಡರವರ ಹೆಸರನ್ನು ಉಲ್ಲೇಖ ಮಾಡಿ ಸರ್ಕಾರದ ಸಹಾಯವಿಲ್ಲದೆ ಒಬ್ಬ ವ್ಯಕ್ತಿಯಾಗಿ, ಒಂದು ಶಕ್ತಿಯಾಗಿ ಬಡವರ ಮಧ್ಯದಲ್ಲಿ ಬೆಳೆದಂತಹ ಬಬ್ಬ ವ್ಯಕ್ತಿ ಈ ಸಮಾಜಕ್ಕೆ ಏನು ಸೇವೆಯನ್ನು ಕೊಡಬಹುದೆನ್ನುವುದಕ್ಕೆ ಮಾನ್ಯ ಕಲ್ಮನೆ ಕಾಮೇಗೌಡರು ಒಂದು ಉದಾಹರಣೆ ಎನ್ನುವಂತಹ ಮಾತುಗಳನ್ನು ಹೇಳಿರುತ್ತಾರೆ. ಅಂತಹ ವಿಶಿಷ್ಟವಾದಂತಹ ವ್ಯಕ್ತಿಯ ಬಗ್ಗೆ ಉಲ್ಲೇಖ ಮಾಡಿದ್ದೀರಿ. ಅವರ ಸಂತಾಪಕ್ಕೆ ಸರ್ಕಾರದ ಪರವಾಗಿ ನಾನು ಸಹ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ.

ಮಾನ್ಯ ಡಾ॥ ಆರ್.ಎಲ್.ಕಶ್ಯಪ್‌ರವರ ಬಗ್ಗೆ ತಾವು ಉಲ್ಲೇಖ ಮಾಡಿದ್ದೀರಿ. 4 ವೇದಗಳಿಗೆ ಭಾಷ್ಯ ಬರೆದು ಅವುಗಳನ್ನು ಕನ್ನಡ, ತಮಿಳು ಮತ್ತು ತೆಲುಗು ಭಾಷೆಗಳಿಗೆ ಭಾಷಾಂತರಿಸಿ, ಸುಮಾರು 50 ಜನ ಪಿ.ಹೆಚ್.ಡಿ., ವಿದ್ಯಾರ್ಥಿಗಳಿಗೆ ಮಾರ್ಗದರ್ಶನವನ್ನು ಮಾಡಿ, 33 ವರ್ಷಗಳ ಕಾಲ ಪ್ರಾಧ್ಯಾಪಕರಾಗಿ ಸೇವೆಯನ್ನು ಸಲ್ಲಿಸಿರುವುದಲ್ಲದೇ, ವಿಜ್ಞಾನ ನಿಯತಕಾಲಿಕೆಯಲ್ಲಿ 250ಕ್ಕೂ ಹೆಚ್ಚು ಲೇಖನಗಳನ್ನು ಪ್ರಕಟಿಸಿ, ಸಾಕ್ಷಿ ಟ್ರಸ್ಟ್‌ನ ಅಧ್ಯಕ್ಷರಾಗಿ ಕೆಲಸ ಮಾಡಿರುವಂತಹ ಡಾ॥ಆರ್.ಎಲ್.ಕಶ್ಯಪ್‌ರವರಿಗೆ ಕೇಂದ್ರ ಸರ್ಕಾರವು 2021 ರಲ್ಲಿ ಪದ್ಮಶ್ರೀ ಪ್ರಶಸ್ತಿ ಮತ್ತು ರಾಜ್ಯ ಸರ್ಕಾರವು 2012ರಲ್ಲಿ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಈ ರೀತಿಯ ಒಂದು ವಿಶಿಷ್ಟ ವ್ಯಕ್ತಿತ್ವವನ್ನು ಹೊಂದಿ ಅಪಾರವಾದಂತಹ ಕೆಲಸವನ್ನು ಮಾಡಿರುವಂತಹ ಡಾ॥ಆರ್.ಎಲ್.ಕಶ್ಯಪ್‌ರವರ ಸಂತಾಪಕ್ಕೆ ನಾನು ಸಹ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ.

ಈ ಎಲ್ಲಾ ಗಣ್ಯರ ಕುಟುಂಬಗಳಿಗೆ ಇವರ ದುಃಖವನ್ನು ಭರಿಸುವಂತಹ ಶಕ್ತಿಯನ್ನು ದೇವರು ಕೊಡಲಿ ಮತ್ತು ಅವರಿಗೆ ಸದ್ಗತಿ ಸಿಗಲಿ ಎಂದು ಹೇಳಿ ತಮ್ಮ ಸಂತಾಪ ಸೂಚನೆಗೆ ಸರ್ಕಾರದ ಪರವಾಗಿ ಸಹಮತವನ್ನು ವ್ಯಕ್ತಪಡಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರ ಪರವಾಗಿ ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು ಮಾತನಾಡಬಹುದಾಗಿದೆ.

**ಶ್ರೀ ಪ್ರಕಾಶ್ ಕೆ.ರಾಥೋಡ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಧನ್ಯವಾದಗಳು. ತಾವು ಮಂಡಿಸಿರುವ ಸಂತಾಪ ಸೂಚನೆಯ ಪರವಾಗಿ ಈಗಾಗಲೇ ಮಾನ್ಯ ಸಭಾನಾಯಕರು ಸಂತಾಪ ಸೂಚನೆಯ ಬಗ್ಗೆ ಮಾತನಾಡಿದ್ದಾರೆ. ಅವರ ಜೊತೆಗೆ ಧ್ವನಿಗೂಡುತ್ತಾ, ಮೊಟ್ಟ ಮೊದಲನೆಯದಾಗಿ ಮಾನ್ಯ ಆನಂದ ಮಾಮನಿಯವರು 1966 ರ ಜನವರಿ, 18 ರಂದು ಜನಿಸಿದ್ದು, ಶ್ರೀಯುತರು 2008, 2013 ಹಾಗೂ 2018ರಲ್ಲಿ ಸವದತ್ತಿ ವಿಧಾನ ಸಭಾ ಕ್ಷೇತ್ರದಿಂದ ಸತತವಾಗಿ ಮೂರು ಬಾರಿ ಆಯ್ಕೆಯಾಗಿ 2020 ರಲ್ಲಿ ವಿಧಾನ ಸಭೆ ಉಪಸಭಾಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಇವರ ತಂದೆ ಕೂಡ ಉಪಸಭಾಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರು ಎನ್ನುವ ಮಾತು ಇದೆ. ಇವರು ಬಹಳಷ್ಟು ದಿವಸ ಆಸ್ಪತ್ರೆಯಲ್ಲಿಯೇ ಇದ್ದರು. ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ವಿರೋಧ ಪಕ್ಷದ ನಾಯಕರು ಇವರು ಆದಷ್ಟು ಬೇಗ ಗುಣಮುಖರಾಗಲಿ ಎಂದು ಬಯಸಸಿದ್ದರು. ಆದರೂ ದೈವ ವಿಧಿಯಂತೆ ಇವರ ಅಗಲಿಕೆಯಿಂದ ಕರ್ನಾಟಕ ರಾಜ್ಯಕ್ಕೆ ಸಾಕಷ್ಟು ನಷ್ಟ ಉಂಟಾಗಿದೆ ಎಂದು ಭಾವಿಸಿ, ಇವರ ಕುಟುಂಬಕ್ಕೆ ಈ ಒಂದು ಸಂತಾಪ ಸೂಚನೆ ಮುಟ್ಟಲಿ ಎಂದು ಹಾರೈಸುತ್ತೇವೆ.

ಮಾನ್ಯ ಜಬ್ಬಾರ್ ಖಾನ್ ಹೊನ್ನಳ್ಳಿರವರು 1942ರ ಮಾರ್ಚ್ 1 ರಂದು ಜನಿಸಿ, ವಿಶೇಷವಾಗಿ ಶ್ರೀಯುತರು ಶಿಕ್ಷಣ ಕ್ಷೇತ್ರದಲ್ಲಿ ಇಸ್ಲಾಂ ಸಂಸ್ಥೆಯ ಅಧ್ಯಕ್ಷರಾಗಿ 1989ರಲ್ಲಿ ವಿಧಾನ ಪರಿಷತ್ತಿಗೆ ನಾಮನಿರ್ದೇಶನಗೊಂಡು, ನಂತರ 1999 ಮತ್ತು 2007ರಲ್ಲಿ ಹುಬ್ಬಳ್ಳಿ ನಗರ ವಿಧಾನ ಸಭಾ ಕ್ಷೇತ್ರದಿಂದ ಎರಡು ಬಾರಿ ವಿಧಾನ ಸಭಾ ಶಾಸಕರಾಗಿ ಧರ್ಮಸಿಂಗ್ ಅವರ ಸಚಿವ ಸಂಪುಟದಲ್ಲಿ ಕ್ರೀಡಾ ಮತ್ತು ಯುವಜನ ಸಚಿವರಾಗಿಯೂ ಸಾಕಷ್ಟು ಸೇವೆ ಸಲ್ಲಿಸಿದ್ದಾರೆ ಮತ್ತು ಮಾಡಲ್ ಉರ್ದು ಪ್ರೌಢಶಾಲೆಯಲ್ಲಿ 18 ವರ್ಷ ಶಿಕ್ಷಕರಾಗಿ ಕೆಲಸ ಮಾಡಿದ್ದಾರೆ. ಇದಷ್ಟೆ ಅಲ್ಲದೇ ಇವರು ನಮ್ಮ ಜಿಲ್ಲಾ ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದರು. ನಮ್ಮ ಪಕ್ಷದ ಸಂಘಟನೆಯಲ್ಲಿ ಸಾಕಷ್ಟು ಕೆಲಸ ಮಾಡಿ, ಹುಬ್ಬಳ್ಳಿ-ಧಾರವಾಡ ಕ್ಷೇತ್ರದಲ್ಲಿ ಸಾಕಷ್ಟು ಸೇವೆ ಸಲ್ಲಿಸಿ, ಹಾಗೆಯೇ ನಮ್ಮ ಪಕ್ಷಕ್ಕೂ ಸಾಕಷ್ಟು ಬಲ ಕೊಡುವಂತಹ ಕೆಲಸವನ್ನು ಮಾಡಿದ್ದಾರೆ. ಇವರು ಕ್ರೀಡಾ ಸಚಿವರಾಗಿದ್ದಾಗಲೂ ಸಹ ಸಾಕಷ್ಟು ಒಳ್ಳೆಯ ಕೆಲಸಗಳನ್ನು ಮಾಡಿದ್ದು, ಒಳ್ಳೆಯ ಕ್ರೀಡಾ ಸಚಿವರೆಂದು ಹೇಳಲಾಗಿದೆ. ಇದರ ಜೊತೆಗೆ ನಾವೆಲ್ಲರೂ

ಕೂಡ ಅವರನ್ನು ಬಹಳ ಪ್ರೀತಿಯಿಂದ ಜಬ್ಬಾರ್ ಖಾನ್ ಹೊನ್ನಳ್ಳಿ ಎಂದು ಕರೆಯುತ್ತಿದ್ದೆವು. ಹಾಗಾಗಿ ಅವರ ಅಗಲಿಕೆಯಿಂದ ಸಾಕಷ್ಟು ನೋವಾಗಿದೆ. ಅವರ ಕುಟುಂಬಕ್ಕೆ ಶಾಂತಿ ಸಿಗಲಿ ಎಂದು ಭಾವಿಸುತ್ತೇನೆ.

(ಮುಂದು)

(1042)19-12-2022(11-40)bsd-md

**ಪ್ರಕಾಶ್ ಕೆ. ರಾಥೋಡ್ (ಮುಂದು)**

ಇನ್ನು ಶ್ರೀ ಎಸ್.ಎಸ್. ಪೂಜಾರ್ ರವರ ಬಗ್ಗೆ ಉಲ್ಲೇಖಿಸಿದ್ದು, ಇವರು ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಸಂಕೇಶ್ವರದಲ್ಲಿ ಜನಿಸಿ, M.A., B.Ed ಪದವೀಧರರಾಗಿದ್ದು, 1998 ರಿಂದ 2004ರ ಅವಧಿಗೆ ಶಿಕ್ಷಕರ ಕ್ಷೇತ್ರದಿಂದ ಸ್ವತಂತ್ರ ಅಭ್ಯರ್ಥಿಯಾಗಿ ವಿಧಾನ ಪರಿಷತ್ತಿಗೆ ಆಯ್ಕೆಯಾಗಿದ್ದರು. ಇವರು ವಿಧಾನ ಪರಿಷತ್ತಿನಲ್ಲಿ ಹಲವಾರು ಬಾರಿ ಶಿಕ್ಷಣ ಕ್ಷೇತ್ರದ ಬಗ್ಗೆ ಚರ್ಚೆಗಳನ್ನು ಮಾಡಿ ಬೆಳಕನ್ನು ಚೆಲ್ಲಿದ್ದಾರೆ. ಅವರ ಆತ್ಮಕ್ಕೆ ಶಾಂತಿ ಸಿಗಲೇಂದು ಹಾಗೂ ಅವರ ಕುಟುಂಬ ವರ್ಗದವರಿಗೆ ದುಃಖವನ್ನು ಭರಿಸತಕ್ಕ ಶಕ್ತಿಯನ್ನು ನೀಡಲೇಂದು ಪ್ರಾರ್ಥಿಸುತ್ತೇನೆ.

ಇನ್ನು ಶ್ರೀ ಸುಧೀಂದ್ರರಾವ್ ಕಸಬೆ ರವರು 1978 ಹಾಗೂ 1983 ರಲ್ಲಿ ಕಲ್ಮಲಾ ವಿಧಾನಸಭಾ ಕ್ಷೇತ್ರದಿಂದ ಎರಡು ಬಾರಿ ಆಯ್ಕೆಯಾಗಿ, 1980ರಲ್ಲಿ ಶ್ರೀ ಆರ್. ಗುಂಡೂರಾವ್ ರವರ ಸಚಿವ ಸಂಪುಟದಲ್ಲಿ ಮುಜರಾಯಿ ಮತ್ತು ಕೃಷಿ ಮಾರುಕಟ್ಟೆ ಸಚಿವರಾಗಿ ಸೇವೆಯನ್ನು ಸಲ್ಲಿಸಿದ್ದರು. ಅವರು ಸಮಾಜ ಸೇವೆಯಲ್ಲಿ ಸಾಕಷ್ಟು ತೊಡಗಿಸಿಕೊಂಡಿದ್ದರು. ನನ್ನ ಪೂಜ್ಯ ತಂದೆಯವರು KPCC (Karnataka Pradesh Congress Committee) ಅಧ್ಯಕ್ಷರಾಗಿದ್ದಾಗ, ಅವರು ಮಂತ್ರಿಯಾಗಿ ನಮ್ಮ ಮನೆಗೆ ಹಲವಾರು ಬಾರಿ ಬಂದು, ಅವರು ಮಾಡಿರುವ ಕೆಲಸಗಳ ಬಗ್ಗೆ ಉಲ್ಲೇಖ ಮಾಡುತ್ತಿದ್ದರು. ಆಗ ನಾನು ಬಹಳ ಚಿಕ್ಕವನಾಗಿದ್ದೆನು. ಆ ಸಮಯದಲ್ಲಿ ನಮ್ಮ ಮನೆಗೆ ಸತತವಾಗಿ ಬರುವುದನ್ನು ನಾನು ನೆನಪಿಸಿಕೊಳ್ಳುತ್ತಾ, ಅವರು ಮಾಡಿರುವ ಸೇವೆ ಹಾಗೂ ವಿಶೇಷವಾಗಿ ಹಲವಾರು ಹಿಂದುಳಿದ ವರ್ಗಗಳ ಬಗ್ಗೆ ಕಾಳಜಿ ಹೊಂದಿರುವ ಶ್ರಮ ಜೀವಿಗಳಾಗಿದ್ದರು. ಅವರ ಅಗಲಿಕೆಯಿಂದ

ನಮಗೆಲ್ಲರಿಗೂ ನೋವಾಗಿದ್ದು, ಅವರ ಕುಟುಂಬಕ್ಕೆ ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಪ್ರಾರ್ಥಿಸುತ್ತೇನೆ.

ಇನ್ನು ಕೋಳೂರು ಬಸನಗೌಡ ರವರು 13ನೇ ಲೋಕಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಆಯ್ಕೆಯಾಗಿ 4 ವರ್ಷ ಸಂಸದರಾಗಿ ಕಾರ್ಯನಿರ್ವಹಿಸಿದ್ದರು. ಶಿಕ್ಷಣ ಕ್ಷೇತ್ರದಲ್ಲಿ ಗಣನೀಯ ಸೇವೆಯನ್ನು ಸಲ್ಲಿಸಿದ್ದ ಅವರು 1980ರಲ್ಲಿ ವೀರಶೈವ ಎಂಜಿನಿಯರಿಂಗ್ ಕಾಲೇಜು ಸ್ಥಾಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಶ್ರೀ ಕೋಳೂರು ಬಸನಗೌಡರು ಕಾಂಗ್ರೆಸ್ ಪಕ್ಷದ ಜಿಲ್ಲಾ ಅಧ್ಯಕ್ಷರಾಗಿದ್ದು, ಶ್ರೀಮತಿ ಸೋನಿಯಾ ಗಾಂಧಿಯವರು ಬಳ್ಳಾರಿ ಮತಕ್ಷೇತ್ರದಿಂದ ಸ್ಪರ್ಧೆ ಮಾಡಿ ಆಯ್ಕೆಯಾದ ಸಂದರ್ಭದಲ್ಲಿ ಸಾಕಷ್ಟು ಕೆಲಸ ಮಾಡಿದ್ದರು. ಇವರು ರಾಜ್ಯಸಭೆಯ ಮತ್ತು ಮಾನ್ಯ ಕೊಂಡಯ್ಯನವರು ಲೋಕಸಭೆಯ ಸದಸ್ಯರಾಗಿದ್ದರು. ಇವರಿಬ್ಬರೂ ಒಂದೇ Letter Head ಅನ್ನು ಉಪಯೋಗಿಸಿ ಬಳ್ಳಾರಿ ಜಿಲ್ಲೆಗೆ ಸಂಬಂಧಪಟ್ಟ ಕೆಲಸಗಳನ್ನು ಮಾಡಿಸುತ್ತಿದ್ದರು. ಅಷ್ಟು ಒಳ್ಳೆಯ ಸ್ನೇಹಿತರಾಗಿದ್ದರು. ಬಳ್ಳಾರಿ ಜಿಲ್ಲೆಯಲ್ಲಿ ಸಾಕಷ್ಟು ಕೆಲಸ ಮಾಡಿ ನಮಗೆಲ್ಲರಿಗೂ ಪ್ರೇರಣೆ ಕೊಟ್ಟರು. ಅವರು ಸರಳ ಸಜ್ಜನ ಜೀವಿಯಾಗಿದ್ದರು. ತದನಂತರ ಸಾಕಷ್ಟು ದಿವಸ ಅನಾರೋಗ್ಯದಿಂದ ಬಳಲಿ ದಿನಾಂಕ 25-11-2022ರಂದು ನಿಧನ ಹೊಂದಿದ್ದಾರೆ. ಅವರ ಆತ್ಮಕ್ಕೆ ಶಾಂತಿ ಮತ್ತು ಅವರ ಕುಟುಂಬ ವರ್ಗದವರಿಗೆ ದುಃಖ ಭರಿಸುವ ಶಕ್ತಿಯನ್ನು ಕೊಡಲಿ ಎಂದು ಪ್ರಾರ್ಥಿಸುತ್ತೇನೆ.

ಇನ್ನು ಶ್ರೀ ಅಬ್ದುಲ್ ಸಮದ್ ಸಿದ್ಧಿಖಿ ರವರು ರಾಯಚೂರು ನಗರಸಭೆಯ ಸದಸ್ಯರಾಗಿ 1988 ರಿಂದ 1994 ರವರೆಗೆ ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾಗಿದ್ದರು. ಶ್ರೀಯುತರು ಅನೇಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ್ದು, ಅವರು New Education Society ಯಡಿ ವಿಶೇಷವಾಗಿ ಪ್ರಾಥಮಿಕ, ಪ್ರೌಢ, ಪದವಿಪೂರ್ವ ಹಾಗೂ ಪದವಿ ಕಾಲೇಜುಗಳನ್ನು ಆರಂಭಿಸಿದ ಕೀರ್ತಿಗೆ ಭಾಜನರಾಗಿದ್ದರು. ಇವರ ನಿಧನದಿಂದ ಒಬ್ಬ ಸರಳ-ಸಜ್ಜನಿಕೆಯ ರಾಜಕಾರಣಿಯನ್ನು ಕಳೆದುಕೊಂಡಿದ್ದೇವೆ ಎಂದು ಭಾವಿಸುತ್ತೇನೆ.

ಇನ್ನು ಶ್ರೀ ಟಿ.ಎಸ್. ಲೋಹಿತಾಶ್ವ ರವರು 5ನೇ ಆಗಸ್ಟ್ 1942 ರಲ್ಲಿ ತುಮಕೂರು ಜಿಲ್ಲೆಯ ತೊಂಡನಗೆರೆ ಗ್ರಾಮದಲ್ಲಿ ಜನಿಸಿ, ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಆಂಗ್ಲ ಭಾಷೆಯಲ್ಲಿ M.A.

ಪದವೀಧರರಾಗಿದ್ದು, 33 ವರ್ಷಗಳ ಕಾಲ ಆಂಗ್ಲ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿರುತ್ತಾರೆ. ಇದನ್ನು ತಾವು ಉಲ್ಲೇಖ ಮಾಡಿದ್ದು, ಅವರು ವಿಶೇಷವಾಗಿ ರಂಗನಾಟಕ ಮತ್ತು ದೂರದರ್ಶನ ಧಾರವಾಹಿಗಳಲ್ಲಿಯೂ ನಟಿಸಿದ್ದು, ರಂಗಭೂಮಿ ಮೂಲಕ ಸಿನಿಮಾ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿರುತ್ತಾರೆ. ಅವರು ಗೀತಾ ಎಂಬ ಕನ್ನಡ ಚಲನಚಿತ್ರದಲ್ಲಿಯೂ ನಟಿಸಿದ್ದಾರೆ. ಅವರು ಧರ್ಮ ದಾರಿತಪ್ಪಿತು, ಗಜೇಂದ್ರ ಹಾಗೂ ಸಾಂಗ್ಲಿಯಾನ ಚಲನಚಿತ್ರಗಳು ಸೇರಿದಂತೆ ಸುಮಾರು 500 ಕ್ಕೂ ಹೆಚ್ಚು ಚಲನಚಿತ್ರಗಳಲ್ಲಿ ನಟಿಸಿದ್ದಾರೆ. ಅವರು ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಪಡೆದಿದ್ದಾರೆ.

ಮಾನ್ಯ ಸಭಾಪತಿಯವರೇ, ನಮ್ಮ ಆಂಗ್ಲ ಪ್ರಾಧ್ಯಾಪಕರಾದ ಶ್ರೀ ಜಿ.ಕೆ. ಗೋವಿಂದರಾವ್ ಎಂಬುವವರು ಸಹ ರಂಗನಟರಾಗಿದ್ದು, ಶ್ರೀ ಲೋಹಿತಾಶ್ವ ಹಾಗೂ ಶ್ರೀ ಗೋವಿಂದರಾವ್ ರವರುಗಳು ಸಹಪಾಠಿಗಳಾಗಿದ್ದರು. ಬಹಳಷ್ಟು ಚಿತ್ರಗಳಲ್ಲಿ ಅವರು ನಟಿಸಿರುವುದನ್ನು ನೋಡಿದ್ದೇವೆ. ಅವರ ನಿಧನಕ್ಕೂ ನಾನು ಸಂತಾಪ ಸೂಚಿಸುವುದು ಸೂಕ್ತ ಎಂದು ನಾನು ಭಾವಿಸುತ್ತೇನೆ.

ಇನ್ನು ಶ್ರೀ ಬಂಗಾರ್ ಆಚಾರ್ ರವರು ಮದ್ದಳೆ ವಾದಕರೂ ಹಾಗೂ ಗೊಂಬೆ ಕುಣಿಸುವುದರಲ್ಲಿಯೂ ಪರಿಣಿತಿ ಹೊಂದಿರುತ್ತಾರೆ. ಕುಲ ಕಸುಬಾದ ಮರದ ಕೆಲಸವನ್ನು ಮಾಡುತ್ತಿದ್ದ ಇವರು ತಂದೆಯವರಿಂದ ಯಕ್ಷಗಾನ ಕಲಿತು ಸುಮಾರು 62 ವರ್ಷಗಳಲ್ಲಿ ಕಬ್ಬಳ್ಳಿಯಲ್ಲಿ ಪ್ರತಿ ವರ್ಷ ಸ್ಥಳೀಯರಿಗೆ ಯಕ್ಷಗಾನ ತರಬೇತಿ ಕೊಟ್ಟು ಮೂಡಲಪಾಯ ಯಕ್ಷಗಾನ ಪ್ರದರ್ಶನ ನೀಡುತ್ತಾ ಬಂದಿದ್ದರು. ಯಕ್ಷಗಾನ ಕ್ಷೇತ್ರದ ಜೀವಮಾನದ ಸಾಧನೆಗಾಗಿ ಶ್ರೀಯುತರಿಗೆ 2019ರಲ್ಲಿ ಕರ್ನಾಟಕ ಯಕ್ಷಗಾನ ಅಕಾಡೆಮಿಯು ಪಾರ್ತಿಸುಬ್ಬ ಪ್ರಶಸ್ತಿ ಹಾಗೂ 2020ನೇ ಸಾಲಿನ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ವಿಶೇಷವಾಗಿ ಜಾನಪದ ಕ್ಷೇತ್ರದಲ್ಲಿ ನೀಡಿರುವ ಕೊಡುಗೆಗೆ ನೀಡಿ ಗೌರವಿಸಲಾಗಿರುತ್ತದೆ. ಅವರ ನಿಧನದಿಂದ ಅವರ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿಯನ್ನು ದೇವರು ಕೊಡಲೆಂದು ಕೋರುತ್ತೇನೆ.

ಇನ್ನು ಕಲ್ಮನೆ ಕಾಮೇಗೌಡ ರವರು ಮಂಡ್ಯ ಜಿಲ್ಲೆಯ ಮಳವಳ್ಳಿ ದಾಸನದೊಡ್ಡ ಗ್ರಾಮದ ಬಳಿಯಿರುವ ಕುಂದನಿ ಬೆಟ್ಟದಲ್ಲಿ ಕುರಿಗಾಹಿಯಾಗಿದ್ದ ಇವರು ಕುರಿ ಮಾರಿ ಸಂಪಾದಿಸಿದ ಹಣದಲ್ಲಿ ಬೆಟ್ಟದ ಮೇಲೆ ಕಟ್ಟೆಗಳನ್ನು ಕಟ್ಟುವ ಮೂಲಕ ಕಟ್ಟೆ ಕಾಮೇಗೌಡ ಎಂದು ಪ್ರಸಿದ್ಧಿಯಾಗಿದ್ದರು. ತಮ್ಮ

ಸ್ವಂತ ಹಣದಲ್ಲಿ ಸುಮಾರು 16ಕ್ಕೂ ಹೆಚ್ಚು ಕೆರೆ ಕಟ್ಟೆಗಳನ್ನು ನಿರ್ಮಿಸಿ ಆಧುನಿಕ ಭಗೀರಥ ಎಂದೇ ಖ್ಯಾತರಾಗಿದ್ದರು. ಸುಮಾರು 2000ಕ್ಕೂ ಹೆಚ್ಚು ಗಿಡಗಳನ್ನು ನೆಟ್ಟು ಪರಿಸರ ಕಾಳಜಿ ವಹಿಸಿರುವ ಮಹಾನ್ ವ್ಯಕ್ತಿಯಾಗಿದ್ದರು ಎಂದು ಭಾವಿಸಿದ್ದೇನೆ. ಇವರ ನಿಸ್ವಾರ್ಥ ಸೇವೆಯಿಂದಾಗಿ ಪ್ರಾಣಿ, ಪಕ್ಷಿಗಳಿಗೆ ಬೇಸಿಗೆ ಕಾಲದಲ್ಲೂ ನೀರು ದೊರೆಯುವಂತೆ ಮಾಡಿ ಅಂತರ್ಜಲ ವೃದ್ಧಿಗೂ ಕಾರಣರಾಗಿದ್ದಾರೆ. ಅವರಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡುವ ಮೂಲಕ ಗೌರವಿಸಲಾಗಿರುತ್ತದೆ.

ಮಾನ್ಯ ಸಭಾಪತಿಯವರೇ, ನಾವು ವಿಶೇಷವಾಗಿ ಬಿಜಾಪುರ ಜಿಲ್ಲೆಯಿಂದ ಬಂದವರಾಗಿದ್ದು, ಮಾನ್ಯ ಗೋವಿಂದ ಕಾರಜೋಳ ರವರು ಸದನದಲ್ಲಿ ಇದ್ದಾರೆ. ನಮ್ಮ ಕಡೆ ಅಂತರ್ಜಲ ಕೆರೆಗಳಾದ ಮೇಲೆ ಹೆಚ್ಚಾಗಿದೆ. ಇದಕ್ಕೆ ಮಾನ್ಯ ಗೋವಿಂದ ಕಾರಜೋಳ ರವರು ಹಾಗೂ ಮಾನ್ಯ ಎಂ.ಬಿ. ಪಾಟೀಲರು ನೀರಾವರಿ ಸಚಿವರಾಗಿ ಕೆಲಸ ಮಾಡಿದ್ದಾರೆ. ಮಂಡ್ಯದಲ್ಲಿ ಕಲ್ಮನೆ ಕಾಮೇಗೌಡರು ಮಾಡಿರುವ ಕೆಲಸವೇ ಪ್ರೇರಣೆ ಎಂದು ನಾನು ಭಾವಿಸಿದ್ದೇನೆ. ನಮ್ಮ ಭಾಗದಲ್ಲಿ ಅಂತರ್ಜಲ ಹೆಚ್ಚಾಗಲು ಅನೇಕ ಕೆಲಸಗಳನ್ನು ಮಾಡಿರುವುದು ಒಳ್ಳೆಯದು.

**ಶ್ರೀ ಗೋವಿಂದ ಎಂ. ಕಾರಜೋಳ (ಜಲಸಂಪನ್ಮೂಲ ಸಚಿವರು):-** ಮಾನ್ಯ ಸಭಾಪತಿಯವರೇ, ನಮಗೆ ಪ್ರೇರಣೆ ಸರ್.ಎಂ. ವಿಶ್ವೇಶ್ವರಯ್ಯನವರಾಗಿದ್ದು, ಅಂದಿನ ಕಾಲದಲ್ಲಿ ಕೆರೆ-ಕಟ್ಟೆಗಳನ್ನು ನಿರ್ಮಾಣ ಮಾಡಿದ್ದಾರೆ. ಕೋಲಾರ ಒಂದೇ ಜಿಲ್ಲೆಯಲ್ಲಿ ಸುಮಾರು 2,500 ಕ್ಕಿಂತಲೂ ಹೆಚ್ಚು ಕೆರೆಗಳನ್ನು ನಿರ್ಮಾಣ ಮಾಡಿದ್ದಾರೆ. ಮಾನ್ಯ ಪ್ರಕಾಶ್ ರಾಥೋಡ್ ರವರು ಹುಟ್ಟಿ ಬೆಳೆದ ಭೂತನಾಳ ಕೆರೆಯನ್ನು ಶ್ರೀಮಾನ್ ವಿಶ್ವೇಶ್ವರಯ್ಯನವರು ನಿರ್ಮಾಣ ಮಾಡಿದ್ದಾರೆ ಎನ್ನುವುದನ್ನು ನೆನಪು ಮಾಡಿಕೊಡುತ್ತೇನೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ವಿಶ್ವೇಶ್ವರಯ್ಯನವರು ಭೂತನಾಳ ಕೆರೆ ನಿರ್ಮಾಣ ಮಾಡಿ ನೀರು ಕೊಟ್ಟಿರುವುದು ಗೊತ್ತಿದೆ. ಆದರೂ ಪ್ರೇರಣೆ ಇರಬಹುದು ಎಂದು ನಾನು ಭಾವಿಸಿದ್ದೇನೆ. ಏಕೆಂದರೆ ನಾವು ಬಹಳಷ್ಟು ಬರಗಾಲ ಪೀಡಿತ ಪ್ರದೇಶದಿಂದ ಬಂದವರಾಗಿದ್ದು, ಆ ಭಾಗದಿಂದ ಬಂದವನಾಗಿ ಇದು ಸಹ ಪ್ರೇರಣೆ ಆಗಿರಬಹುದು ಎಂದು ನಾನು ಭಾವಿಸಿದ್ದೇನೆ.

ಇನ್ನು ಡಾ॥ ಆರ್.ಎಲ್. ಕಶ್ಯಪ್ ರವರು ವೇದಾಂತ ವಿದ್ವಾನ್‌ರಾಗಿದ್ದು, ದಿನಾಂಕ 11-11-2022 ರಲ್ಲಿ ನಿಧನ ಹೊಂದಿದ್ದು, ವೇದ ವಿಜ್ಞಾನದಲ್ಲಿ ಆಳವಾದ ಅಧ್ಯಯನ ನಡೆಸಿದ್ದ ಶ್ರೀಯುತರು ವೇದ ಮತ್ತು ವೇದಾಂಗದ ಪರಿಣಿತರಾಗಿ ವೇದಗಳನ್ನು ಆಂಗ್ಲ ಭಾಷೆಗೆ ಅನುವಾದಿಸಿದ್ದರು. ನಾಲ್ಕು ವೇದಗಳಿಗೆ ಭಾಷ್ಯ ಬರೆದು ಅವುಗಳನ್ನು ಕನ್ನಡ, ತಮಿಳು ಮತ್ತು ತೆಲಗು ಭಾಷೆಗಳಿಗೆ ಅನುವಾದ ಮಾಡಿದ್ದರು. ಅವರು Electrical and Computer Engineering ವ್ಯಾಸಂಗ ಮಾಡಿದ್ದ ಶ್ರೀಯುತರು ಅಮೇರಿಕಾದಲ್ಲಿ ಷಡ್ರ್ಯೂ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿರುತ್ತಾರೆ. ಅರವಿಂದೋ ಕಪಾಲಿ ಶಾಸ್ತ್ರಿ ಇನ್‌ಸ್ಟಿಟ್ಯೂಷನ್ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದು, ಶ್ರೀಯುತರು Machine Intelligence ಕ್ಷೇತ್ರದಲ್ಲಿ ಸಂಶೋಧನೆ ನಡೆಸಿರುತ್ತಾರೆ. 33 ವರ್ಷ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುವ ಮೂಲಕ 50 Ph.D. ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ, ವಿಜ್ಞಾನ ನಿಯತಕಾಲಿಕೆಯಲ್ಲಿ 250 ಕ್ಕೂ ಹೆಚ್ಚು ಲೇಖನಗಳನ್ನು ಪ್ರಕಟಿಸಿರುತ್ತಾರೆ. ಅವರಿಗೆ 2012ರಲ್ಲಿ ಕರ್ನಾಟಕ ಸರ್ಕಾರವು ರಾಜ್ಯೋತ್ಸವ ಪ್ರಶಸ್ತಿ ನೀಡಿರುತ್ತದೆ.

(ಮುಂದು)

**(1043)19.12.2022/11.50/ಹೆಚ್‌ವಿ:ಎಂಡಿ**

**ಶ್ರೀ ಪ್ರಕಾಶ್ ಕೆ.ರಾಥೋಡ್ (ಮುಂದು:**

ಅವರ ನಿಧನದ ನಷ್ಟವನ್ನು ಭರಿಸುವಂತಹ ಶಕ್ತಿಯನ್ನು ಅವರ ಕುಟುಂಬಕ್ಕೆ ದೇವರು ಕರುಣಿಸಲಿ ಎಂದು ಹೇಳುತ್ತಾ, ಈ ಸಂತಾಪ ಸೂಚನೆಯ ಮೇಲೆ ಮಾನ್ಯ ವಿರೋಧ ಪಕ್ಷದ ನಾಯಕರ ಪರವಾಗಿ ಮಾತನಾಡಲು ನನಗೆ ತಾವು ಅವಕಾಶವನ್ನು ನೀಡಿದ್ದೀರಿ, ಈ ಎಲ್ಲ ಮೃತರ ಕುಟುಂಬಗಳಿಗೆ ನಮ್ಮೆಲ್ಲರ ಪರವಾಗಿ ತಾವು ಸಾಂತ್ವನವನ್ನು ತಲುಪಿಸಬೇಕೆಂದು ಕೋರುತ್ತಾ, ಸಂತಾಪ ಸೂಚನೆಯ ಮೇಲಿನ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಈ ಸಂತಾಪ ಸೂಚನೆಯ ಪಟ್ಟಿಯಲ್ಲಿ ಎರಡು ಬಾರಿ ರೋಣ ಮತಕ್ಷೇತ್ರ ಮತ್ತು ಗದಗ್ ಮತಕ್ಷೇತ್ರಗಳಿಂದ ಎರಡು ಬಾರಿ ಆಯ್ಕೆಗೊಂಡಿದ್ದ ಮಾನ್ಯ ಶ್ರೀ ಶೈಲಪ್ಪ ಬಿದರಿಯವರ ಹೆಸರು ಸೇರ್ಪಡೆಯಾಗಿಲ್ಲ. ಆ ಹೆಸರು ಸೇರ್ಪಡೆಯಾಗಬೇಕೆನ್ನುವುದು ನನ್ನ ಪ್ರಾರ್ಥನೆಯಾಗಿದೆ.

**ಶ್ರೀ ಚನ್ನರಾಜ್ ಬಸವರಾಜ್ ಹಟ್ಟಿ ಹೊಳಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ನಮ್ಮ ಜಿಲ್ಲೆಯ ನಾಯಕರಾಗಿದ್ದ ಮಾನ್ಯ ಆನಂದ ಮಾಮನಿಯವರ ಅಕಾಲ ನಿಧನದ ಹಿನ್ನೆಲೆಯಲ್ಲಿ ಮಂಡಿಸಿರುವಂತಹ ಈ ಸಂತಾಪ ಸೂಚನೆಯ ನಿರ್ಣಯದಲ್ಲಿ ಮಾತನಾಡುವುದಕ್ಕೆ ತಾವು ನನಗೆ ಅನುವು ಮಾಡಿಕೊಟ್ಟಿರುವುದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ನಮ್ಮ ಜಿಲ್ಲೆ ಮತ್ತು ಈ ರಾಜ್ಯ ಕಂಡಂತಹ ಅತ್ಯಂತ ಸರಳ ಸಜ್ಜನಿಕೆಯ ವ್ಯಕ್ತಿಗಳಲ್ಲಿ ಮಾನ್ಯ ಆನಂದ ಮಾಮನಿ ಸಾಹೇಬರು ಒಬ್ಬರಾಗಿದ್ದಾರೆ. ನೋಡುವುದಕ್ಕೆ ಒರಟು ಸ್ವಾಭಾವದ ರೀತಿ ಕಾಣುತ್ತಿದ್ದರು. ಆದರೆ, ಅವರ ಜೊತೆಗೆ ನಿಕಟ ಸಂಪರ್ಕ ಹೊಂದಿದವರಿಗಷ್ಟೇ ಮಾನ್ಯ ಆನಂದ ಮಾಮನಿಯವರ ಬಗ್ಗೆ ಮತ್ತು ಅವರ ಮನದಾಳದ ಮಾತುಗಳ ಬಗ್ಗೆ ಗೊತ್ತಾಗುತ್ತದೆ. ಸವದತ್ತಿ ರೇಣುಕಾ ಯಲ್ಲಮ್ಮ ಮತಕ್ಷೇತ್ರ ನಮ್ಮ ಬೆಳಗಾವಿ ಜಿಲ್ಲೆಯಲ್ಲಿಯೇ ಅತ್ಯಂತ ಹಿಂದುಳಿದ ಮತಕ್ಷೇತ್ರವಾಗಿದೆ. ಸತತವಾಗಿ ಮೂರು ಬಾರಿ ವಿಧಾನ ಸಭಾ ಕ್ಷೇತ್ರಕ್ಕೆ ಆಯ್ಕೆಗೊಂಡವರಲ್ಲಿ ಮಾನ್ಯ ಆನಂದ ಮಾಮನಿಯವರೂ ಒಬ್ಬರು ಎಂದು ಹೇಳಬಹುದಾಗಿದೆ. ಸವದತ್ತಿ ರೇಣುಕಾ ಯಲ್ಲಮ್ಮ ವಿಧಾನಸಭಾ ಕ್ಷೇತ್ರದಿಂದ ಎರಡು ಬಾರಿ ಶಾಸಕರಾಗಿ ಆಯ್ಕೆಗೊಂಡ ಮೇಲೆ ಮೂರನೆಯ ಬಾರಿ ಯಾರೂ ಆರಿಸಿ ಬಂದಿಲ್ಲ. ಆದರೆ, ಇವರು ಸತತವಾಗಿ ಮೂರು ಬಾರಿ ಆರಿಸಿ ಬಂದಿದ್ದಾರೆ. ಇದಕ್ಕೆ ಅವರಿಗಿದ್ದ ಜನಪರ ಕಾಳಜಿ ಮತ್ತು ತಮ್ಮ ಕ್ಷೇತ್ರದ ಜನರೊಂದಿಗೆ ಅವರಿಗಿದ್ದ ಸಂಬಂಧವೇ ಮುಖ್ಯ ಕಾರಣವಾಗಿದೆ. ನನ್ನ ಮತ್ತು ಮಾನ್ಯ ಆನಂದ ಮಾಮನಿಯವರ ನಡುವೆ ಬಹಳಷ್ಟು ವೈಯಕ್ತಿಕ ಸಂಬಂಧಗಳಿವೆ. ನಾವು ಸವದತ್ತಿ ರೇಣುಕಾ ಯಲ್ಲಮ್ಮ ಮತಕ್ಷೇತ್ರದಲ್ಲಿ ಸಕ್ಕರೆ ಕಾರ್ಖಾನೆಯನ್ನು ನಿರ್ಮಾಣ ಮಾಡಬೇಕಾದರೆ, ಒಬ್ಬ ಹಿರಿಯ ಸಹೋದರನ ಸ್ಥಾನದಲ್ಲಿ ನಿಂತು ಬಹಳಷ್ಟು ಪ್ರೀತಿಯಿಂದ

ನಮಗೆ ಸಹಕಾರವನ್ನು ನೀಡಿದ್ದರು. ಇದಕ್ಕಾಗಿ ನಾನು ಮಾನ್ಯ ಆನಂದ ಮಾಮನಿಯವರಿಗೆ ಸದಾ ಚಿರಋಣಿಯಾಗಿರುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ಬೆಳಗಾವಿ ಜಿಲ್ಲಾ ಡಿ.ಸಿ.ಸಿ. ಬ್ಯಾಂಕ್‌ನ ನಿರ್ದೇಶಕರಾಗಿಯೂ ಅವರು ಸೇವೆಯನ್ನು ಸಲ್ಲಿಸಿದ್ದರು. ಸಹಕಾರಿ ರಂಗದಲ್ಲಿಯೂ ಸಹ ರೈತರಿಗೆ ವಿಶೇಷವಾದ ಸಹಾಯವನ್ನು ತಮ್ಮ ಕಾರ್ಯವ್ಯಾಪ್ತಿಯಲ್ಲಿ ಮಾಡಿದ್ದರು ಎನ್ನುವ ಅಂಶವನ್ನು ಈ ಸದನದ ಮೂಲಕ ತಿಳಿಸುವುದಕ್ಕೆ ಬಯಸುತ್ತಿದ್ದೇನೆ. ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಪ್ರಸಿದ್ಧಿ ಹೊಂದಿರುವತಹ ಸವದತ್ತಿ ರೇಣುಕಾ ಯಲ್ಲಮ್ಮ ದೇವಸ್ಥಾನದ ನವೀಕರಣ ಆ ಭಾಗದ ಜನರ ಬಹುದಿನಗಳ ಬೇಡಿಕೆಯಾಗಿತ್ತು. ಮಾನ್ಯ ಆನಂದ ಮಾಮನಿಯವರು ತಮ್ಮ ಕಾಲಾವಧಿಯಲ್ಲಿ ಈ ದೇವಸ್ಥಾನದ ಪುನರುಜ್ಜೀವನಕ್ಕಾಗಿ ಸರ್ಕಾರದಿಂದ ದೊಡ್ಡ ಮೊತ್ತದ ಹಣವನ್ನು ತರುವಲ್ಲಿ ಯಶಸ್ವಿಯಾಗಿದ್ದರು ಮತ್ತು ಆ ದೇವಸ್ಥಾನವನ್ನು ಸುಸಜ್ಜಿತವಾಗಿ ಸುಶೋಭೀಕರಣಗೊಳಿಸುವುದರಲ್ಲಿ ಇವರು ಯಶಸ್ವಿಯಾಗಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಕೆಲವು ದಿನಗಳ ಹಿಂದೆ ಸಚಿವರಾದ ಮಾನ್ಯ ಗೋವಿಂದ ಕಾರಜೋಳ ಅವರ ಅಧ್ಯಕ್ಷತೆಯಲ್ಲಿ ಸುವರ್ಣಸೌಧದಲ್ಲಿ ನಡೆದಂತಹ ಕೆ.ಡಿ.ಪಿ. ಮೀಟಿಂಗ್‌ಗೆ ಮಾನ್ಯ ಆನಂದ ಮಾಮನಿಯವರು ಬಂದಿದ್ದರು ಆಗ ನಾನು ಅವರನ್ನು ಭೇಟಿಯಾಗಿದ್ದೆ. ಅವರ ಆರೋಗ್ಯದ ಬಗ್ಗೆ ವಿಚಾರಿಸುತ್ತಾ, "ಅಣ್ಣಾ ತಾವು ಬಹಳ ವೀಕ್ ಆಗಿ ಕಾಣುತ್ತಿದ್ದೀರಿ, ಒಮ್ಮೆ ಹೆಲ್ತ್ ಚೆಕ್‌ಅಪ್ ಮಾಡಿಸಿಕೊಳ್ಳಿ" ಎನ್ನುವ ಸಲಹೆಯನ್ನು ಸಹ ನೀಡಿದ್ದೆ. ಆ ಸಂದರ್ಭದಲ್ಲಿ ಅವರು, "ಏನೂ ಇಲ್ಲಪ್ಪ, ಸ್ವಲ್ಪ ಶುಗರ್ ಲೆವೆಲ್ ಹೆಚ್ಚಾಗಿರುವುದರಿಂದ ನನ್ನ ದೇಹದ ತೂಕ ಕಡಿಮೆಯಾಗಿದೆ" ಎನ್ನುವ ಮಾತನ್ನು ಹೇಳಿದ್ದರು. ಆಗಲೇ ಅವರು ತಮ್ಮ ಆರೋಗ್ಯ ತಪಾಸಣೆಯನ್ನು ಮಾಡಿಸಿಕೊಂಡಿದ್ದರೆ, ಈಗ ಅವರು ನಮ್ಮೆಲ್ಲರ ನಡುವೆ ಇರುತ್ತಿದ್ದರೆಂದು ನಾನು ಭಾವಿಸುತ್ತೇನೆ. ಕೊನೆಯದಾಗಿ ಅವರ ಮನದಾಳದ ಒಂದು ಮಾತನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುವುದಕ್ಕೆ ಬಯಸುತ್ತಿದ್ದೇನೆ. "ನನ್ನ ಮತಕ್ಷೇತ್ರದ ಜನರ ಸಲುವಾಗಿ ನನ್ನ ಕಾಲಾವಧಿಯಲ್ಲಿ ಒಮ್ಮೆಯಾದರೂ ನಾನು ಮಂತ್ರಿಯಾಗುತ್ತೇನೆ" ಎನ್ನುವ ಮಾತನ್ನು ನನ್ನ ಬಳಿ ಒಂದೆರಡು ಬಾರಿ ವ್ಯಕ್ತಪಡಿಸಿದ್ದರು. ದೇವರು ಆ ಜಿಲ್ಲೆಯ ಜನತೆಯ ಮತ್ತು ಅವರ ಮನದಾಳದ ಆಸೆಯನ್ನು ಈಡೇರಿಸಬೇಕಾಗಿತ್ತು ಎಂದು ಹೇಳುತ್ತಾ, ಅವರ ಕುಟುಂಬಸ್ಥರ ಜೊತೆಗೆ ಈ

ದುಃಖದ ಸಂದರ್ಭದಲ್ಲಿ ಸದಾ ನಾವೆಲ್ಲರೂ ಇರುತ್ತೇವೆ ಎನ್ನುವ ಮಾತನ್ನು ತಿಳಿಸುತ್ತಾ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಡಾ॥ ತೇಜಸ್ವಿನಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು):-** ಸನ್ಮಾನ್ಯ ಸಭಾಪತಿಯವರೇ, ತಮಗೆ ಸಿಕ್ಕಿದಂತಹ ಅವಕಾಶದಲ್ಲಿ ತಮ್ಮ ಜೀವಿತದ ಅವಧಿಯಲ್ಲಿ ಇಂತಹ ಉನ್ನತ ಸದನದಲ್ಲಿ ಅವರುಗಳ ಹೆಸರು ಉಲ್ಲೇಖವಾಗುವಂತೆ ನಾಡು ಮತ್ತು ನುಡಿ ಅವರುಗಳನ್ನು ನೆನಪಿಸಿಕೊಳ್ಳುವಂತೆ ಸಾಧನೆ ಮಾಡಿ, ಅವರದೇ ಆಗಿರುವ ಛಾಪನ್ನು ಮೂಡಿಸಿ; ನಮ್ಮನ್ನು ಆಗಲಿರುವ ಎಲ್ಲ ಹಿರಿಯ ಚೇತನಗಳಿಗೆ ನನ್ನ ಕಣ್ಣೀರಿನ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ನಾನು ಇಲ್ಲಿ ಮೂರು ಜನರ ಬಗ್ಗೆ ಮಾತನಾಡುವುದಕ್ಕೆ ಇಷ್ಟಪಡುತ್ತಿದ್ದೇನೆ. ಮೊದಲನೆಯವರಾಗಿ ಶ್ರೀ ಟಿ.ಎಸ್.ಲೋಹಿತಾಶ್ವರವರ ಬಗ್ಗೆ ಹೇಳಬೇಕಾದರೆ, ಅವರು ನನಗೆ ಗುರುಗಳಾಗಿದ್ದರು. ಬೆಂಗಳೂರಿನ ಮಹಾರಾಣಿ ಕಾಲೇಜಿನಲ್ಲಿ ನಾನು ಓದುತ್ತಿದ್ದ ಸಂದರ್ಭದಲ್ಲಿ ಅವರು ಆಂಗ್ಲ ಭಾಷಾ ಪ್ರಾಧ್ಯಾಪಕರಾಗಿದ್ದರು. ಸಿನಿಮಾ, ಅಭಿನಯ, ನಟನೆ ಎಂದರೆ, ತಕ್ಷಣವೇ ನೆನಪಾಗುವುದು ರಂಗಾಯಣ ರಘು ಅವರ ಹೆಸರು. ರಂಗಕರ್ಮಿಗಳಾಗಿ ಕಲೆ ಮತ್ತು ನಟನೆಗೆ ಒಂದು ಭೂಮಿಕೆಯಯನ್ನು ನಿರ್ಮಾಣ ಮಾಡಿ ಸಾಧನೆ ಮಾಡಿದವರು ಮಾನ್ಯ ಟಿ.ಎಸ್.ಲೋಹಿತಾಶ್ವರವರು. ಅವರ ಕಂಠಸಿರಿ ಮತ್ತು ಡೈಲಾಗ್ ಡೆಲವರಿ ಅತ್ಯದ್ಭುತವಾಗಿತ್ತು. ಮಾನ್ಯ ಮೋಹನ್‌ಕುಮಾರ್ ಕೊಂಡಜ್ಜಿಯವರು ಸಹ ಚಿತ್ರ ನಿರ್ಮಾಪಕರಾಗಿದ್ದಾರೆ. ನನಗೆ ಮಾನ್ಯ ಪಿ.ಲಂಕೇಶ್‌ರವರ ಗರಡಿಯಲ್ಲಿ ಪಳಗುವಂತಹ ಅವಕಾಶ ಸಿಕ್ಕಿತ್ತು. ಒಂದು ಭಾಷೆಯನ್ನು ಎಷ್ಟು ಚೆನ್ನಾಗಿ ದುಡಿಸಿಕೊಳ್ಳಬಹುದು ಎನ್ನುವುದನ್ನು ಇವರಿಂದ ನೋಡಿ ತಿಳಿದುಕೊಳ್ಳಬಹುದು. ಸಾಹಿತ್ಯ, ಡೈಲಾಗ್ ಡೆಲವರಿ, ದೇಹಭಾಷೆ ಮತ್ತು ಭಾಷೆಯೆನ್ನುವುದು ಎಷ್ಟು ಮುಖ್ಯವಾಗಿರುತ್ತದೆ ಎನ್ನುವುದು ಇವರನ್ನು ನೋಡಿದರೆ ಗೊತ್ತಾಗುತ್ತದೆ. ಸಾಮಾಜಿಕ ಪರಿವರ್ತನೆಯನ್ನು ಮಾಡುವುದಕ್ಕೆ ಸಿನಿಮಾ, ನಾಟಕ, ರಂಗಭೂಮಿ ಎಷ್ಟು ಮುಖ್ಯವಾಗುತ್ತದೆ ಎನ್ನುವುದನ್ನು ಮಾನ್ಯ ಟಿ.ಎಸ್.ಲೋಹಿತಾಶ್ವರವರು ತಿಳಿಸಿಕೊಟ್ಟಿದ್ದಾರೆ. ಮಾನ್ಯ ಟಿ.ಎಸ್.ಲೋಹಿತಾಶ್ವರವರು ನಮಗೆ ಆಂಗ್ಲ ಭಾಷೆಯನ್ನು ಕಲಿಸಿಕೊಡುತ್ತಿದ್ದರು. ಹಳ್ಳಿಯಿಂದ ಬಂದಂತಹ ನಮಗೆ ಆಂಗ್ಲ ಕಾದಂಬರಿಕಾರರ ಮತ್ತು ಲೇಖಕರ

ಪಾಠಗಳನ್ನು ಕೇಳಸಿಕೊಳ್ಳುವುದೇ ಕಷ್ಟವಾಗಿತ್ತು. ಅಂತಹ ಭಾಷೆಯನ್ನು ತಿಳಿದುಕೊಳ್ಳುವುದಕ್ಕೆ ಅವರು ಉತ್ತೇಜನ ನೀಡುತ್ತಿದ್ದರು. ಕಾಲೇಜುಗಳಲ್ಲಿ ನಡೆಯುವಂತಹ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ನಿರಂತರವಾಗಿ ಭಾಗವಹಿಸಬೇಕೆನ್ನುವುದು ಅವರ ಅಭಿಲಾಷೆಯಾಗಿತ್ತು. ಇತ್ತೀಚಿನ ಮಕ್ಕಳು ಬೇರೆ ಚಟುವಟಿಕೆಗಳಲ್ಲಿ ಭಾಗವಹಿಸದೇ ಕೇವಲ ಮೊಬೈಲ್ ನೋಡುವುದರಲ್ಲಿಯೇ ಕಾಲಕಳೆಯುವುದರ ಜೊತೆಗೆ ಮೆದುಳಿಗೆ ಹೆಚ್ಚು ಕೆಲಸ ಕೊಡುತ್ತಿದ್ದಾರೆಯೇ ಹೊರತು ಶಾರೀರಿಕವಾಗಿ ವ್ಯಕ್ತಿತ್ವನ್ನು ವಿಕಸನಗೊಳಿಸುವಂತಹ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುತ್ತಿಲ್ಲ. ಆದರೆ, ರಂಗಭೂಮಿ, ನಾಟಕ ಮತ್ತು ನಟನೆ ಎನ್ನುವುದು ಶಾರೀರಿಕವಾಗಿ ವ್ಯಕ್ತಿತ್ವವನ್ನು ವಿಕಸನಗೊಳಿಸುತ್ತದೆ ಎನ್ನುವುದು ವಿಶ್ವದ ವಿದ್ವಾಂಸರ ಅಭಿಪ್ರಾಯವಾಗಿದೆ. ವಿಶ್ವ ಮಟ್ಟದಲ್ಲಿ ಸಾಧನೆ ಮಾಡುವುದಕ್ಕೆ ಇಂತಹ ಒಂದು ಅಧ್ಯಯನ ಮತ್ತು ಸಾಧನೆ ಎಷ್ಟು ಮುಖ್ಯ ಎನ್ನುವುದನ್ನು ಮಾನ್ಯ ಟಿ.ಎಸ್.ಲೋಹಿತಾಶ್ವರವರು ತಮ್ಮೊಳಗೆ ತಾವೇ ಅನುಭವಿಸಿ ನಮಗೆ ಪಾಠ ಹೇಳಿಕೊಡುತ್ತಿದ್ದರು. ನಂತರ ಅವರು ಧಾರವಾಹಿಗಳಲ್ಲಿ ನಟಿಸುವುದಕ್ಕೆ ಅವಕಾಶ ದೊರಕಿತು. ನಂತರ ಸಿನಿಮಾ ರಂಗಕ್ಕೆ ಬಂದಾಗ ದಿವಂಗತ ಶಂಕರನಾಗ್‌ರವರ ಜೊತೆಗೆ ಅಭಿನಯಿಸಿದ್ದಾರೆ. ಮಾನ್ಯ ಟಿ.ಎಸ್.ನಾಗಾಭರಣಾ ಅವರಂತಹ ಮಹಾನ್ ವ್ಯಕ್ತಿಗಳನ್ನು ಭೇಟಿ ಮಾಡುವಂತಹ ಅವಕಾಶ ಪತ್ರಕರ್ತೆಯಾಗಿ ನನಗೆ ಸಿಕ್ಕಿತ್ತು. ನಮ್ಮ ಸಿನಿಮಾ ರಂಗ, ನಾಟಕ ಕಲಾವಿದರ ಮತ್ತು ರಂಗಭೂಮಿ ಕಲಾವಿದರ ಅವಿರತ ಪರಿಶ್ರಮವನ್ನು ಅಳವಡಿಸಿಕೊಂಡರೇ ಇನ್ನಷ್ಟು ಅರ್ಥಪೂರ್ಣವಾಗಿರುವ ಕೊಡುಗೆಯನ್ನು ಕೊಡಬಹುದು ಎನ್ನುವುದಕ್ಕೆ ಮಾನ್ಯ ಟಿ.ಎಸ್.ಲೋಹಿತಾಶ್ವರವರು ಉದಾಹರಣೆಯಾಗಿ ಕಾಣುತ್ತಾರೆ. ವಿಶೇಷವಾಗಿ ಕಂಠಸಿರಿಯನ್ನು ಮತ್ತು ಭಾಷೆಯನ್ನು ಯಾವ ರೀತಿಯಲ್ಲಿ ಬಳಕೆ ಮಾಡಿಕೊಳ್ಳಬಹುದು ಎನ್ನುವ ನಿಟ್ಟಿನಲ್ಲಿ ಅವರದೇ ಆಗಿರುವ ವ್ಯಕ್ತಿತ್ವವನ್ನು ಹೊಂದಿದ್ದರು. ಅವರ ಸುಪುತ್ರರು ಸಹ ಉತ್ತಮ ನಟರಾಗಿದ್ದಾರೆ.

ಇನ್ನು ಎರಡನೆಯವರಾಗಿ, ಕಲ್ಮನೆ ಕಾಮೇಗೌಡರ ಬಗ್ಗೆ ಹೇಳಬೇಕಾದರೆ, ಅವರು 16 ಕೆರೆಗಳನ್ನು ನಿರ್ಮಾಣ ಮಾಡಿದ್ದರು ಎನ್ನುವುದು ಮುಖ್ಯವಲ್ಲ. ಆದರೆ, ತಾವು ಸಾಕಿದ ಕುರಿಗಳನ್ನು ಮಾರಾಟ ಮಾಡಿ ಬಂದಂತಹ ತಮ್ಮ ಬೆವರಿನ ಹಣದಿಂದ ಅವರು ಆ ಕೆರೆಗಳನ್ನು ಕಟ್ಟಿಸಿದ್ದಾರೆ. ಅಂತರ್ಜಲ ವೃದ್ಧಿಯಾಗಬೇಕೆನ್ನುವ ದೃಷ್ಟಿಯಿಂದ ಅವರು ಯಾವುದೇ ಪ್ರಚಾರವನ್ನು ಬಯಸದೇ ಈ

ಕೆಲಸವನ್ನು ಮಾಡಿದ್ದಾರೆ. "ಮನ್ ಕಿ ಬಾತ್" ರೇಡಿಯೋ ಕಾರ್ಯಕ್ರಮದಲ್ಲಿ ಮಾನ್ಯ ಪ್ರಧಾನಮಂತ್ರಿಗಳು ಸಾಲುಮರದ ತಿಮ್ಮಕ್ಕ ಮತ್ತು ಇವರ ಹೆಸರುಗಳನ್ನು ಉಲ್ಲೇಖ ಮಾಡಬೇಕಾದರೆ, ಅವರ ಸಾಧನೆ ಅಪಾರವಾಗಿದೆ. ಸ್ವಾತಂತ್ರ್ಯ ಹೋರಾಟಕ್ಕೆ ಕಾಣಿಕೆಯನ್ನು ನೀಡಿರುವಂತಹ ಸ್ವಾತಂತ್ರ್ಯ ಹೋರಾಟಗಾರರ ರೀತಿಯಲ್ಲಿ ಪ್ರತಿಯೊಂದು ಜಿಲ್ಲೆ ಮತ್ತು ಗ್ರಾಮಗಳಲ್ಲಿ ಈ ರೀತಿಯ ಸಾಧಕರು ಎಲೆ ಮರೆಕಾಯಿಯ ರೀತಿಯಲ್ಲಿ ಇದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿರಬಹುದು ಅಥವಾ ಸಂಬಂಧಪಟ್ಟ ಇಲಾಖೆಯವರು ಇಂತಹ ಸಾಧಕರನ್ನು ಕುರಿತು ಕಿರು ಹೊತ್ತಿಗೆಗಳನ್ನು ಹೊರ ತಂದರೆ, ಇತ್ತೀಚಿನ ಮಕ್ಕಳಿಗೆ ಅದು ಪ್ರೇರಣಾದಾಯಿಯಾಗಿರುತ್ತದೆ. ಇದರ ಅವಶ್ಯಕತೆಯೂ ಇದೆ. ಹವಾಮಾನ ಬದಲಾವಣೆ ಎನ್ನುವುದು ಒಂದು ದೊಡ್ಡ ಸಮಸ್ಯೆಯಾಗಿದೆ. ಕೋವಿಡ್-19 ಸಮಯದಲ್ಲಿ ನಮಗೆ ಕುಡಿಯುವುದಕ್ಕೆ ಗಾಳಿಯೇ ಸಿಗಲಿಲ್ಲ. ಆಮ್ಲಜನಕದ ಸಿಲಿಂಡರ್‌ಗಳನ್ನು ವಿಮಾನಗಳ ಮೂಲಕ ತರಿಸಿಕೊಳ್ಳಲಾಗಿತ್ತು. ಇದರ ಬದಲಿಗೆ ಪ್ರತಿಯೊಂದು ಮನೆಯಲ್ಲಿಯೂ ಎರಡು ಗಿಡಗಳನ್ನು ನೆಡಬೇಕು ಮತ್ತು ಪ್ರತಿಯೊಂದು ಊರುಗಳಲ್ಲಿ ಇರುವಂತಹ ಗುಂಡು ತೋಪುಗಳನ್ನು ಹಾಗೂ ಅರಣ್ಯಗಳನ್ನು ಉಳಿಸಬೇಕೆನ್ನುವ ನಿಟ್ಟಿನಲ್ಲಿ ಇಂತಹ ಸಾಧಕರು ನಮಗೆ ದಾರಿದೀಪವಾಗಬೇಕಾಗಿದೆ ಎನ್ನುವ ಮಾತನ್ನು ಹೇಳಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಆರ್.ಎಲ್.ಕಶ್ಯಪ್‌ನವರು ಗುರುವಾಗಿ ತನ್ನ ಶಿಷ್ಯಂದಿರಿಗೆ ಸಂಶೋಧನಾ ವಿಷಯವನ್ನು ಆಯ್ಕೆ ಮಾಡಿ ಕೊಟ್ಟು ಮಾರ್ಗದರ್ಶನವನ್ನು ಮಾಡಿ ಸುಮಾರು 50 ಪಿ.ಹೆಚ್.ಡಿ. ವಿದ್ಯಾರ್ಥಿಗಳಿಗೆ ಸಂಶೋಧನಾ ಮಾರ್ಗದರ್ಶಕರಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ಗುರು ಮತ್ತು ಶಿಷ್ಯರ ಪವಿತ್ರ ಬಾಂಧವ್ಯ ಎನ್ನುವುದು ಇವತ್ತು ಕಡಿಮೆಯಾಗುತ್ತಿದೆ. ಈ ಪಾವಿತ್ರತೆಯನ್ನು ಎತ್ತಿ ಹಿಡಿಯುವಂತಹ ಅವಶ್ಯಕತೆ ಇದೆ. ಗುರು ಪರಂಪರೆಯನ್ನು ಪಾಲನೆ ಮಾಡಿದ್ದಾರೆ. "ಶಾರದ ಲಿಪಿ" ಎನ್ನುವುದು ಇವತ್ತು ಕಾಣೆಯಾಗುತ್ತಿದೆ. "ಶಾರದ ಲಿಪಿ" ನಮ್ಮದು. "ಕಾಶ್ಮೀರ ಪುರವಾಸಿನಿ ಶಾರದೆ" ಎಂದು ನಾವು ಕರೆಯುತ್ತೇವೆ. ಅದು ಇವತ್ತು ಪಾಕಿಸ್ತಾನದ ಎಲ್.ಓ.ಸಿ. ಹತ್ತಿರ "ತೀಲ್ವಲ್" ಎನ್ನುವ ಭಾರತದ ಕೊನೆಯ ಗಡಿ ಗ್ರಾಮದಲ್ಲಿದೆ. ಇಲ್ಲಿರುವ ಪ್ರತಿಯೊಬ್ಬರು ಅಲ್ಲಿಗೆ ಹೋಗಿ ಬರಬೇಕಾಗಿದೆ. ಏಕೆಂದರೆ ಶೃಂಗೇರಿಯ ಶಾರದ ಪೀಠದವರು ಅಲ್ಲಿ

ದೇವಸ್ಥಾನವನ್ನು ಕಟ್ಟಿದ್ದಾರೆ.

(ಮುಂದು)

(1044) 19.12.2022 12.00 : ಪಿಕೆ:ಎಕೆ

**ಡಾ॥ ತೇಜಸ್ವಿನಿ ಗೌಡ (ಮುಂದು)**

ಕಾಶ್ಮೀರಿ ಪಂಡಿತರು ಅಲ್ಲಿನ ಅರಾಧಕರಾಗಿದ್ದರು; ಅನುಯಾಯಿಗಳಾಗಿದ್ದರು. ಕೇದಾರದಲ್ಲಿ ಶ್ರೀ ಶಂಕರಾಚಾರ್ಯರ ಒಂದು ಮೂರ್ತಿ ಸ್ಥಾಪನೆ ಮಾಡಿ, ದೇಶದ ಪ್ರಧಾನಿಯವರು ಅವರಿಗೆ ಗೌರವ ಕೊಟ್ಟಿದ್ದಾರೆ. ಮಾನ್ಯ ಸಭಾಪತಿಯವರೇ, ಇವತ್ತು ಈ ಲಿಪಿ ಕಳೆದು ಹೋಗುತ್ತಿದೆ. ಅವರನ್ನು ಸ್ಮರಣೆ ಮಾಡುವುದರ ಮೂಲಕ ಅರ್ಥಕ್ಕೆ ನಿಂತಿರುವ ಸಂಸ್ಕೃತ, ಶಾರದಾ ಲಿಪಿಯನ್ನು ಮುಂದುವರೆಸಬೇಕಿದೆ. ಪಾಕಿಸ್ತಾನದಲ್ಲೂ ಶಾರದಾ ಲಿಪಿ ಎಂದೇ ಗುರುತಿಸುತ್ತಾರೆ. ಆ ಪೀಠವನ್ನು ಮುಟ್ಟಿದರೆ ತಮಗೆ ತೊಂದರೆಯಾಗುತ್ತದೆ ಎಂಬುದು ಅಲ್ಲಿನ ನಂಬಿಕೆ ಕೂಡ ಆಗಿದೆ. ಹಾಗಾಗಿ ಅಲ್ಲಿ ಆ ಹೆಸರನ್ನೂ ಕೂಡ ಬದಲಾವಣೆ ಮಾಡಿಲ್ಲ. ಇವತ್ತು ಆ ಲಿಪಿ ಕಳೆದುಹೋಗುತ್ತಿದೆ. ಕನ್ನಡ ಶಾಸ್ತ್ರೀಯ ಭಾಷೆ; ಪ್ರಾಚೀನ ಭಾಷೆಯಾಗಿದೆ. ಇಂಥವರ ಸ್ಮರಣೆಯ ಮೂಲಕ ಅರ್ಥಕ್ಕೆ ನಿಂತಿರುವ ಕೆಲಸವನ್ನು ನಾವು ಮುಂದಕ್ಕೆ ತೆಗೆದುಕೊಂಡು ಹೋಗುವುದಕ್ಕೆ ಪ್ರೇರಣದಾಯಿಯಾಗಿದೆ. ಹಾಗಾಗಿ ಇವರದು ಮಹತ್ವದ ಕೊಡುಗೆಯಾಗಿದ್ದು, ಸದರಿಯವರ ಆತ್ಮಕ್ಕೆ ಶಾಂತಿ ಸಿಗಲೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ತಂದಿರುವಂತಹ ಸಂತಾಪ ಸೂಚನೆಗೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ. ಈಗಾಗಲೇ ಹಲವರು ಜನ ಸದಸ್ಯರು ಈ ಕುರಿತು ಮಾತನಾಡಿದ್ದಾರೆ. ಮಾನ್ಯ ಜಬ್ಬಾರ್‌ಖಾನ್ ಹೊನ್ನಳ್ಳಿಯವರಿಗೆ ಆ ಭಾಗದ ಜನ ಪ್ರೀತಿಯಿಂದ "ಜನಾಬ್" ಎಂದು ಕರೆಯುತ್ತಿದ್ದರು. ಕೋಮು ಸಾಮರಸ್ಯಕ್ಕೆ ಹೆಸರುವಾಸಿಯಾಗಿದ್ದ ಸನ್ಮಾನ್ಯರು ಶಿಕ್ಷಣ ಕ್ಷೇತ್ರಕ್ಕೆ ಸಾಕಷ್ಟು ಕೆಲಸ ಮಾಡಿದ್ದಾರೆ. ಮಂತ್ರಿಯಾಗಿ ಒಳ್ಳೆಯ ಕೆಲಸ ಮಾಡಿದ್ದಾರೆ. ಇವತ್ತೂ ಕೂಡ ಆ ಭಾಗದಲ್ಲಿ ಸನ್ಮಾನ್ಯರ ಬಗ್ಗೆ ಎಲ್ಲಾ ಸಮಾಜದವರು ವಿಶೇಷ

ಅಭಿಮಾನವನ್ನು ಇಟ್ಟುಕೊಂಡಿದ್ದಾರೆ. ಮಾನ್ಯ ಸಭಾಪತಿಯವರೇ, ಮೃತರ ಆತ್ಮಕ್ಕೆ ಶಾಂತಿ ಕೋರುತ್ತೇನೆ.

ಮಾನ್ಯ ಸುಧೀಂದ್ರರಾವ್ ಕಸಬೆಯವರು ಮಂತ್ರಿಯಾಗಿ, ಶಾಸಕರಾಗಿ ಕೆಲಸ ಮಾಡಿದ್ದರು. ನಾನು ಕಾಂಗ್ರೆಸ್‌ನ ವಿದ್ಯಾರ್ಥಿ ವಿಭಾಗದ ಅಧ್ಯಕ್ಷನಾಗಿದ್ದಾಗ ಅವರ ಜೊತೆ ಸಾಕಷ್ಟು ಒಡನಾಟ ಇತ್ತು. ಅವರು ಯುವಕರ ಬಗ್ಗೆ ಹೆಚ್ಚು ಕಾಳಜಿ ವಹಿಸುತ್ತಿದ್ದರು.

ರಾಯಚೂರಿನ ಸನ್ಮಾನ್ಯ ಅಬ್ದುಲ್ ಸಮದ್ ಸಿದ್ಧಿಖಿಯವರು ರಾಜ್ಯಸಭೆಯ ಮಾಜಿ ಸದಸ್ಯರಾಗಿದ್ದರು. ಇವರು ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಹಲವಾರು ಸಂಸ್ಥೆಗಳನ್ನು ಹುಟ್ಟು ಹಾಕಿದ್ದರು; ಹಲವಾರು ಕಾರ್ಯಕ್ರಮಗಳನ್ನು ಮಾಡಿದ್ದರು. ಈ ಸಮಾಜದ ಅಭಿವೃದ್ಧಿಗೆ ಪ್ರಾಮಾಣಿಕ ಕೆಲಸ ಮಾಡಿದ್ದರು. ಅವರನ್ನೂ ಕೂಡ ಇಂದು ನೆನೆಸಿಕೊಳ್ಳಬೇಕಾಗುತ್ತದೆ.

ಇವತ್ತು ತಾವೇನು 10 ಜನರ ಬಗ್ಗೆ ಸಂತಾಪ ಸೂಚನೆಯನ್ನು ತಂದಿದ್ದೀರೋ ಅದಕ್ಕೆ ಸಹಮತ ವ್ಯಕ್ತಪಡಿಸುತ್ತಾ ಅವರುಗಳ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಬಯಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ತಂದಿರುವ ಸಂತಾಪ ಸೂಚನೆಗೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ. ಇವರಲ್ಲಿ ಪ್ರಮುಖವಾಗಿ 3 ಜನ ಆತ್ಮೀಯರಾಗಿದ್ದಾರೆ. ಸನ್ಮಾನ್ಯ ಆನಂದ ಮಾಮನಿಯವರು ಈ ಜಿಲ್ಲೆಯವರು. ಅವರು ಅತಿ ಸಣ್ಣ ವಯಸ್ಸಿನಲ್ಲಿ ರಾಜಕೀಯ ಪ್ರವೇಶಿಸಿ, ಸವದತ್ತಿ ಕ್ಷೇತ್ರದಿಂದ 3 ಸಲ ಆರಿಸಿ ಬಂದಿದ್ದರು. ಈ ಸಾಧನೆಯನ್ನು ಬೇರೆ ಯಾರೂ ಮಾಡಿಲ್ಲ. ಮೊನ್ನೆ ಚುನಾವಣೆ ಮುಗಿದ ಮೇಲೆ ನಾನು ಎಲ್ಲಮ್ಮನ ದೇವಸ್ಥಾನಕ್ಕೆ ಹೋಗಿದ್ದೆ. ಆಗ ಅಲ್ಲಿಗೆ ಅವರೂ ಕೂಡ ಬಂದಿದ್ದರು. ಆ ಸಂದರ್ಭದಲ್ಲಿ ನಾನು, ಆನಂದ ಇವತ್ತೇಕೋ ಸರಿಯಾಗಿ ಕಾಣುತ್ತಿಲ್ಲ; ಆರೋಗ್ಯ ಸರಿಯಿಲ್ಲವೇ ಎಂದು ಕೇಳಿದ್ದೆ. ಆಗ ಅವರು, ನನಗೆ ಸ್ವಲ್ಪ ತ್ರಾಸ್ ಆಗಿದೆ ಎಂಬ ಮಾತನ್ನು ಹೇಳಿದಾಗ, ಸರಿಯಾಗಿ ಚೆಕ್ ಮಾಡಿಸು ಎಂದು ಹೇಳಿದ್ದೆ. ಅವರು ಕ್ಯಾನ್ಸರ್‌ನಿಂದ ಬಳಲುತ್ತಿದ್ದರೂ ಅದನ್ನು ಯಾರ ಮುಂದೆ ಕೂಡ ಹೇಳಿರಲಿಲ್ಲ.

3ನೇ ಸ್ಟೇಜ್‌ಗೆ ಬಂದಾಗ ಹೇಳಿದ್ದರು. ಸದರಿಯವರು ಅವರ ತಂದೆಯಂತೆ ವಿಧಾನಸಭೆಯ ಉಪ ಸಭಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಒಬ್ಬ ಶ್ರೇಷ್ಠ ಮತ್ತು ಕಳಕಳ ಇದ್ದಂಥ ರಾಜಕಾರಣಿಯಾಗಿದ್ದರು ಎಂದು ಹೇಳಿದರೆ ತಪ್ಪಾಗುವುದಿಲ್ಲ. ಅವರ ಕ್ಷೇತ್ರದ ಜನ ಅವರ ಬಗ್ಗೆ ಅಪಾರ ಗೌರವವನ್ನು ಇಟ್ಟುಕೊಂಡಿದ್ದರು. ತನ್ನಲ್ಲಿರುವ ಕಾಯಿಲೆ ಬಗ್ಗೆ ಹೊರಗಡೆ ಎಲ್ಲಾದರೂ ಹೇಳಿದರೆ ಏನಾದರೂ ಆಗಬಹುದು ಎಂದು ಭಾವಿಸಿದ್ದರು. ನಾನೊಂದು ಸಲ ಅವರನ್ನು ಆಸ್ಪತ್ರೆಯಲ್ಲಿ ಭೇಟಿ ಮಾಡಿದ್ದಾಗ, ಏಕೆ ಇಂತಹ ತಪ್ಪು ಮಾಡಿದೆ ಎಂದು ಬೈದಿದ್ದೆ. ತನ್ನದಲ್ಲದ ತಪ್ಪಿಗೆ ಬಲಿಯಾದವರ ಪೈಕಿ ಮಾನ್ಯ ಆನಂದ ಮಾಮನಿಯವರೂ ಕೂಡ ಒಬ್ಬರು ಎಂದು ಹೇಳಿದರೆ ತಪ್ಪಾಗುವುದಿಲ್ಲ. ಸನ್ಮಾನ್ಯರ ಕುಟುಂಬದವರು ನಮಗೆ ತುಂಬಾ ಪರಿಚಯಸ್ಥರು ಹಾಗೂ ಒಡನಾಟ ಹೊಂದಿದ್ದವರಾಗಿದ್ದೆವು. ಇವರ ನಿಧನದಿಂದ ಕೇವಲ ಈ ಜಿಲ್ಲೆಗಷ್ಟೇ ಅಲ್ಲ; ಇಡೀ ರಾಜ್ಯಕ್ಕೆ ಹಾನಿಯಾಗಿದೆ. ಸನ್ಮಾನ್ಯರು ನಿಧನರಾಗಿದ್ದಾಗ ಅವರ ಮನೆಗೆ ಹೋಗಿದ್ದೆವು. ಅವರ ಕುಟುಂಬದವರು, ಸಣ್ಣ ಮಕ್ಕಳು ಬಹಳಷ್ಟು ವ್ಯಥೆ ಪಡುತ್ತಿದ್ದರು. ಸನ್ಮಾನ್ಯರಿಗೆ ಅವರ ತಾಯಿ ಮೇಲೆ ಅಪಾರ ಪ್ರೀತಿ ಇತ್ತು. ಅವರ ತಾಯಿಗೆ ಮಂಡಿ ಚಿಪ್ಪಿನ ಸಮಸ್ಯೆ ಇದ್ದು ಅದನ್ನು ಬದಲಾಯಿಸಬೇಕಾಗಿತ್ತು. ಆದರೆ, ಅವರ ತಾಯಿಯವರಿಗೆ ಅದು ಇಷ್ಟವಿರಲಿಲ್ಲ. ನಾನು ಈ ಕುರಿತು ಮಾತನಾಡಿದಾಗ, ನಾನು ಒಲ್ಲೆ ಎಂದಿದ್ದೇ; ಆದರೂ ಆನಂದ ಓಡಾಡಿ ಇಷ್ಟೆಲ್ಲಾ ಮಾಡಿಸಿದ್ದಾನೆ; ಈಗ ನಾನು ಆರಾಮವಾಗಿದ್ದೇನೆ ಎನ್ನುವ ಮಾತನ್ನು ಹೇಳಿದ್ದರು. ಒಬ್ಬ ಒಳ್ಳೆಯ ಸ್ನೇಹಿತನನ್ನು ಕಳೆದುಕೊಂಡಂತಾಗಿದೆ. ಸನ್ಮಾನ್ಯರ ನಿಧನದಿಂದ ನಮ್ಮ ರಾಜ್ಯಕ್ಕೆ ಹಾನಿಯಾಗಿದೆ; ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ಪ್ರಾರ್ಥಿಸುತ್ತೇನೆ. ಸದರಿಯವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ದೇವರು ಕರುಣಿಸಲಿ ಎಂದು ನಾನು ಪರಮಾತ್ಮನಲ್ಲಿ ಕೇಳಿಕೊಳ್ಳುತ್ತೇನೆ.

ಮಾನ್ಯ ಜಬ್ಬಾರ್ ಖಾನ್ ಹೊನ್ನಳ್ಳಿಯವರು ಹುಬ್ಬಳ್ಳಿಯವರು ಸರ್ಕಾರಿ ಪ್ರಾಥಮಿಕ ಶಾಲೆಯ ಶಿಕ್ಷಕರಾಗಿ ಸೇವೆಯನ್ನು ಪ್ರಾರಂಭ ಮಾಡಿದ್ದರು. ಆಗಲೇ ಅವರು ಅನೇಕ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿದ್ದರು; ಸಮಾಜದ ಬಗ್ಗೆ ಕಳಕಳ ಹೊಂದಿದ್ದರು. ಅವರು ಶಿಕ್ಷಕರಾಗಿದ್ದ ಸಂದರ್ಭದಲ್ಲಿ ಈದ್ಗಾ ಮೈದಾನದ ಸಮಸ್ಯೆ ಬಂದಾಗ ಆ ಸಂಬಂಧ ಎಲ್ಲರನ್ನೂ ಕರೆಸಿ, ಸಮಾಧಾನ

ಪಡಿಸುವಂತಹ ಕೆಲಸ ಮಾಡಿದ್ದರು. ಅವರು ಮಾಡಿದ ಕೆಲಸವನ್ನು ನೋಡಿ, ಅವರ ಕೆಲಸಕ್ಕೆ ರಾಜೀನಾಮೆ ಕೊಡಿಸಿದ ಸನ್ಮಾನ್ಯ ಎಸ್.ಆರ್.ಬೊಮ್ಮಾಯಿಯವರು ಅವರನ್ನು ಎಂ.ಎಲ್.ಸಿ ಆಗಿ ಮಾಡಿದ್ದರು.

ಸನ್ಮಾನ್ಯರು ಅಂಜುಮನ್ ಇಸ್ಲಾಂ ಸಂಸ್ಥೆಯ ಅಧ್ಯಕ್ಷರಾಗಿದ್ದರು. ಅಲ್ಲಿ ಇವತ್ತು 17 ಸಂಸ್ಥೆಗಳು ನಡೆಯುತ್ತಿವೆ. ಈ ಅಂಜುಮನ್ ಸಂಸ್ಥೆ ಹುಟ್ಟಿದಾಗ ಅದರ ಅಭಿವೃದ್ಧಿಗೆ ಸಾಕಷ್ಟು ಸುಧಾರಣೆಗಳನ್ನು ಮಾಡಿದ್ದರು. ಅಲ್ಲಿ 14-15 ಸಾವಿರ ಮಕ್ಕಳು ಓದುತ್ತಿದ್ದರು. ಆ ಸಂಸ್ಥೆಯನ್ನು ಆಧುನಿಕರಣಗೊಳಸುವ ನಿಟ್ಟಿನಲ್ಲೂ ಕೆಲಸ ಮಾಡಿದ್ದರು. ಅವರು ಎಲ್ಲಾ ಸಮಾಜದವರೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದ್ದರು. ಹುಬ್ಬಳ್ಳಿಯನ್ನು ಶಾಂತವಾಗಿರಿಸುವ ದಿಸೆಯನ್ನು ಅವರ ಪಾತ್ರವೂ ಇತ್ತು. ಭಗವಂತನು ಅವರ ಆತ್ಮಕ್ಕೆ ಶಾಂತಿ ನೀಡಲಿ ಎಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಎಸ್.ಪೂಜಾರಿಯವರು ಮತ್ತು ನಾನು ವಿಧಾನ ಪರಿಷತ್ತಿಗೆ ಒಂದೇ ದಿವಸ ಆರಿಸಿ ಬಂದಿದ್ದೆವು. 1980 ರಿಂದ ನಾವು ಜೊತೆಯಾಗಿಯೇ ಇದ್ದೆವು. ನಾವು ಕರ್ನಾಟಕ ಮಾಧ್ಯಮಿಕ ಶಾಲಾ ನೌಕರರ ಸಂಘ ಎನ್ನುವ ಒಂದು ಸಂಘಟನೆಯನ್ನು ಕಟ್ಟಿದ್ದೆವು. ಅದಕ್ಕೆ ನಾನು ಅಧ್ಯಕ್ಷನಾಗಿದ್ದೆ; ಅವರು ಉಪಾಧ್ಯಕ್ಷರಾಗಿದ್ದರು. ಶಿಕ್ಷಣ ಸಂಸ್ಥೆಗಳ ಬಗ್ಗೆ ರಾಜ್ಯಾದ್ಯಂತ ನಾವು ಅವಿರತವಾಗಿ ಹೋರಾಟ ಮಾಡಿದ್ದೆವು. ಮೊಟ್ಟ ಮೊದಲಿಗೆ 1980ರಲ್ಲಿ, ಸೇವೆಯಲ್ಲಿದ್ದ ಶಿಕ್ಷಕರನ್ನು ಆರಿಸಿ ಕಳುಹಿಸಿದ ಕೀರ್ತಿ ಈ ಭಾಗದ ಜನರಿಗೆ ಸಲ್ಲುತ್ತದೆ. ಸೇವೆಯಲ್ಲಿದ್ದವರು ಚುನಾವಣೆಗೆ ನಿಲ್ಲಬಾರದು ಎನ್ನುವ ನಿಯಮವನ್ನು ಮಾಡಿದ್ದರು. ಆ ಕುರಿತು ಸುಪ್ರೀಂ ಕೋರ್ಟ್‌ಗೆ ಹೋದಾಗ "any employee of an aided institution can contest the election" ಎನ್ನುವ ತೀರ್ಪು ಬಂದಿತ್ತು. ಸದರಿಯವರು ಶಿಕ್ಷಕರ ಬಗ್ಗೆ ಅಪಾರವಾದ ಕಾಳಜಿಯನ್ನು ಇಟ್ಟುಕೊಂಡು ಹಗಲು-ರಾತ್ರಿ ಕೆಲಸ ಮಾಡುತ್ತಿದ್ದರು. ಸನ್ಮಾನ್ಯರು 3 ಸಲ ಅಂದರೆ 1980, 1986 ಮತ್ತು 1992ರಲ್ಲಿ ವಿಧಾನ ಪರಿಷತ್ತಿನ ಸದಸ್ಯರಾಗಿ ಆಯ್ಕೆಯಾಗಿದ್ದರು. 2000ನೇ ಇಸವಿಯಲ್ಲಿ ಅವರಿಗೆ ಹೃದಯದ ಸಮಸ್ಯೆಯಾದಾಗ, ಆಪರೇಷನ್ ಮಾಡುವುಕ್ಕೆ ಸಂಬಂಧಪಟ್ಟಂತೆ ವೈದ್ಯರ ತಪ್ಪು ನಿರ್ಣಯದ ಕಾರಣ ಅವರಿಗೆ ಪ್ಯಾರಾಲಿಸಿಸ್ ಆಯಿತು; ಮೂಕರಾಗಿಬಿಟ್ಟರು. 2000ನೇ

ಇಸವಿಯಿಂದ ಅವರು ನಿಧನರಾಗುವವರೆಗೆ ಮಾತು ಬರುತ್ತಿರಲಿಲ್ಲ. ಆಪರೇಷನ್ ಮಾಡಿದ ವೈದ್ಯನ ಬಗ್ಗೆ ಬಹಳಷ್ಟು ಸಿಟ್ಟು-ಅಸಮಾಧಾನ ಇತ್ತು. ಅವರ ನಿಧನ ಮುಂಚೆ, ಅವರನ್ನು ಕಾಣಲು ಹೋದಾಗ, ನಾವು ಮಾತನಾಡಿದ ನಂತರ ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತಿದ್ದರು. ಇಂತಹ ಒಬ್ಬ ಹೋರಾಟಗಾರರ ನಿಧನದಿಂದ ಇಡೀ ಕರ್ನಾಟಕದಲ್ಲಿ ಶಿಕ್ಷಕರ ಸಂಘಟನೆಗೆ ಪ್ರೇರೇಪಿಸುವಂತಹ ಒಬ್ಬ ವ್ಯಕ್ತಿ ಇಲ್ಲದಂತಾಗಿದೆ. ಸನ್ಮಾನ್ಯರ ನಿಧನದಿಂದ ಇಡೀ ಶಿಕ್ಷಕ ವೃಂದಕ್ಕೆ ಬಹಳಷ್ಟು ನೋವಾಗಿದೆ. ಇವತ್ತು ಸಂಜೆ 6 ಗಂಟೆಗೆ ಅವರ ಶ್ರದ್ಧಾಂಜಲಿ ಸಭೆ ಇದೆ. ಸದರಿಯವರ ಆತ್ಮಕ್ಕೆ ಶಾಂತಿಯನ್ನು ಕೋರಿ, ಭಗವಂತ ಅವರ ಕುಟುಂಬಕ್ಕೆ ಸನ್ಮಾನ್ಯರ ಆಗಲಿಕೆಯಿಂದಾದ ನೋವನ್ನು ತಡೆದುಕೊಳ್ಳುವ ಶಕ್ತಿ ಕೊಡಲಿ ಎಂದು ಪ್ರಾರ್ಥಿಸುತ್ತೇನೆ. 2000ನೇ ಇಸವಿಯಿಂದ ಇಲ್ಲಿಯವರೆಗೆ ಅವರನ್ನು ಕುಟುಂಬದವರು ಒಂದು ಹೂವಿನ ಮಾದರಿಯಲ್ಲಿ ರಕ್ಷಣೆ ಮಾಡಿದ್ದರು. ಅವರ ಶ್ರೀಮತಿಯವರು ಮಾಡಿದ ಸೇವೆ ಏನಿದೆ, ಅದು ಇಡೀ ಕರ್ನಾಟಕದ ಹೆಣ್ಣು ಮಕ್ಕಳಿಗೆ ಆದರ್ಶವಾಗಿರುವಂಥದ್ದು ಎಂದು ಹೇಳಿದರೆ ತಪ್ಪಾಗಲಾರದು.

ಸನ್ಮಾನ್ಯರ ಬಗ್ಗೆ ಅಪಾರವಾದ ಕಾಳಜಿಯನ್ನು ಇಟ್ಟುಕೊಂಡಿದ್ದ ಸಾವಿರಾರು ಶಿಕ್ಷಕರು ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿದ್ದಾರೆ. ಭಗವಂತ ಮೃತರ ಆತ್ಮಕ್ಕೆ ಶಾಂತಿಯನ್ನು ನೀಡಲಿ.

ಸನ್ಮಾನ್ಯ ಕೋಳೂರು ಬಸವನಗೌಡರವರು ನಮಗೆ ಬಹಳ ಹತ್ತಿರದವರು. ಅವರು ವೀರಶೈವ ವಿದ್ಯಾರ್ಥಿಗಳ ಸಂಘದ ಕಾರ್ಯದರ್ಶಿಯಾಗಿ ಬಹಳಷ್ಟು ಕೆಲಸವನ್ನು ಮಾಡಿದ್ದರು. ಬಳ್ಳಾರಿಯಲ್ಲಿ ಉತ್ತಮವಾದ ಶಿಕ್ಷಣ ವ್ಯವಸ್ಥೆಯನ್ನು ಜಾರಿಗೆ ತರುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿದ್ದರು.

(ಮುಂದು)

(1045) 19-12-2022 12.10 DS-AK

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಮುಂದು):**

ಅದರ ಕಾರ್ಯದರ್ಶಿಗಳಾಗಿದ್ದರು. ಶ್ರೀಮತಿ ಸೋನಿಯಾ ಗಾಂಧಿಯವರು ಚುನಾವಣೆಯಾದ ಮೇಲೆ ರಾಜೀನಾಮೆ ಕೊಟ್ಟ ನಂತರ ಆ ಸ್ಥಳಕ್ಕೆ ಇಡೀ ಬಳ್ಳಾರಿ ಜನ ಅವಿರೋಧವಾಗಿ ಅವರನ್ನು ಆಯ್ಕೆ ಮಾಡಿ

ಕಳುಹಿಸಿದರು. ನಾಲ್ಕು ವರ್ಷ ಅವರು ಲೋಕಸಭೆ ಸದಸ್ಯರಾಗಿ ಕೆಲಸ ಮಾಡಿದರು. ಇನ್ನು ಉಳಿದಂತಹ ಅನೇಕ ಮಹನೀಯರು ಇವತ್ತು ನಮ್ಮ ಎದುರಿಗಿಲ್ಲ. ಈಗಾಗಲೇ ಸಾಕಷ್ಟು ಸ್ನೇಹಿತರು ಅವರ ಬಗ್ಗೆ ಮಾತನಾಡಿದ್ದಾರೆ. ಅವರೆಲ್ಲರ ಆತ್ಮಕ್ಕೆ ಶಾಂತಿಯನ್ನು ಕೋರಿ, ಇವತ್ತಿನ ಈ ಸಭೆಯಲ್ಲಿ ತಾವು ಮಂಡಿಸಿರುವ ಸಂತಾಪ ಸೂಚನೆಗೆ ನನ್ನ ಸಂಪೂರ್ಣವಾದ ಸಹಮತವನ್ನು ವ್ಯಕ್ತಪಡಿಸಿ ನನ್ನ ಮಾತನ್ನು ಮುಗಿಸುತ್ತೇನೆ, ನಮಸ್ಕಾರ.

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.(ವಿಧಾನ ಸಭೆಯಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ತಾವು ಸಂತಾಪ ಸೂಚನೆಯಲ್ಲಿ ಉಲ್ಲೇಖಿಸಿರುವ ಗಣ್ಯರರು ಹಾಗೂ ಮಹನೀಯರೆಲ್ಲರಿಗೂ ಹೃದಯಪೂರ್ವಕವಾದ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತಾ, ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತೇನೆ. ಅದೇ ರೀತಿ ಅವರ ಕುಟುಂಬ ವರ್ಗದವರಿಗೆ ಅವರ ಅಗಲಿಕೆಯ ದುಃಖವನ್ನು ಭರಿಸುವಂತಹ ಶಕ್ತಿ ನೀಡಲಿ ಎಂದು ಪ್ರಾರ್ಥನೆ ಮಾಡುತ್ತೇನೆ. ಸುಮಾರು ಏಳೂವರೆ ದಶಕಗಳ ಕಾಲ ಕರಾವಳಿಯ ಯಕ್ಷಗಾನ ರಂಗದ ಸೇವೆ ಸಲ್ಲಿಸಿದಂತಹ ಮತ್ತು ವಿಧಾನಸಭೆಯ ಶಾಸಕರಾಗಿ ಕರ್ತವ್ಯವನ್ನು ನಿರ್ವಹಿಸಿದಂತಹ ಶ್ರೀ ಕುಂಬ್ಳೆ ಸುಂದರರಾಯರವರ ಹೆಸರನ್ನು ಸಹ ಈ ಸಂತಾಪ ಸೂಚನೆಯಲ್ಲಿ ಸೇರಿಸಬೇಕೆಂದು ವಿನಂತಿಸುತ್ತೇನೆ.

**ಶ್ರೀ ಗೋವಿಂದ ಎಂ. ಕಾರಜೋಳ (ಜಲಸಂಪನ್ಮೂಲ ಸಚಿವರು):-** ಮಾನ್ಯ ಸಭಾಪತಿಯವರೇ, ತಾವು ತಂದಿರುವಂತಹ ಸಂತಾಪ ಸೂಚನೆಯನ್ನು ಬೆಂಬಲಿಸಿ ನಾನು ಮಾತನಾಡಬಯಸುತ್ತಿದ್ದೇನೆ. ಬಹಳ ನೋವಿನ ಸಂಗತಿ ಎಂದರೆ, ಶ್ರೀ ಆನಂದ ಮಾಮನಿಯವರ ಅಕಾಲಿಕ ನಿಧನ. ಶ್ರೀ ಆನಂದ ಮಾಮನಿಯವರ ತಂದೆಯವರು ನನ್ನ ಜೊತೆಯಲ್ಲಿ ಶಾಸಕರಾಗಿದ್ದರು, ಅವರ ಜೊತೆಯಲ್ಲೂ ನಾನು ಕೆಲಸ ಮಾಡಿದ್ದೇನೆ. ಅದೇರೀತಿ ಶ್ರೀ ಆನಂದ ಮಾಮನಿಯವರ ಜೊತೆಯಲ್ಲೂ ಕೆಲಸ ಮಾಡುವಂತಹ ಪ್ರಸಂಗ ನನಗೆ ಒದಗಿ ಬಂದಿತ್ತು. ಆದರೆ ದುರ್ದೈವದ ಸಂಗತಿ ಎಂದರೆ, ಅವರು ಇಷ್ಟು ಚಿಕ್ಕವಯಸ್ಸಿನಲ್ಲೇ ನಮ್ಮನ್ನು ಅಗಲುತ್ತಾರೆಂದು ನಾವು ಯಾರು ಕೂಡ ಕನಸು-ಮನಸ್ಸಿನಲ್ಲಿಯೂ ಕಂಡಿರಲಿಲ್ಲ. ಶ್ರೀ ಆನಂದ ಮಾಮನಿಯವರ ತಂದೆ ಮೊದಲನೇ ಬಾರಿ ಶಾಸಕರಾದಾಗ ಅವರು ನಮ್ಮ ಜೊತೆಯಲ್ಲಿ ಕೆಲಸ ಮಾಡುವಾಗ ಸವದತ್ತಿ

ದೇವಸ್ಥಾನ ಕ್ಷೇತ್ರದ ಅಭಿವೃದ್ಧಿ ಮಾಡುವುದಕ್ಕೆ ಬಹಳಷ್ಟು ಕೆಲಸ ಮಾಡಿದ್ದರು. ಅವರ ತಂದೆಯಂತೆ ಶ್ರೀ ಆನಂದ ಮಾಮನಿಯವರು ಕೂಡ ಆ ದೇವಸ್ಥಾನದ ಅಭಿವೃದ್ಧಿ ಮಾಡಿರುವುದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಅಷ್ಟೇ ಅಲ್ಲದೆ ಅನೇಕ ಬಾರಿ ನನ್ನ ಹತ್ತಿರ ಹೇಳುತ್ತಿದ್ದರು, ನಾನು ಬೆಳಗಾವಿ ಜಿಲ್ಲೆಯ ಉಸ್ತುವಾರಿ ಮಂತ್ರಿಯಾಗಿರುವುದರಿಂದ ಸವದತ್ತಿ ಕ್ಷೇತ್ರದಲ್ಲಿ ಧರ್ಮಸ್ಥಳ ರೀತಿಯಲ್ಲಿ, ಈ ಕಡೆ ಇರತಕ್ಕಂಥ ಇನ್ನುಳಿದ ದೊಡ್ಡ ದೊಡ್ಡ ದೇವಸ್ಥಾನದಲ್ಲಿರುವಂತಹ ವ್ಯವಸ್ಥೆ ನಮ್ಮಲ್ಲಿಯೂ ಕೂಡ ಆಗಬೇಕೆಂಬುದು ಅವರ ಚಿಂತನೆಯಾಗಿತ್ತು. ಸವದತ್ತಿ ಕ್ಷೇತ್ರಕ್ಕೆ ಮಹಾರಾಷ್ಟ್ರ, ಆಂಧ್ರ ಪ್ರದೇಶ, ತೆಲಂಗಾಣ ಮತ್ತು ತಮಿಳುನಾಡು, ಈ ನಾಲ್ಕು ರಾಜ್ಯಗಳಿಂದ ದೇವಸ್ಥಾನಕ್ಕೆ ಭಕ್ತರು ಬರುತ್ತಿದ್ದಾರೆ. ಅಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಬಹಳ ಇದೆ. ಏಕೆಂದರೆ, ದೇವಸ್ಥಾನದ ಜಾತ್ರೆ ಸಂದರ್ಭದಲ್ಲಿ 4-6 ಲಕ್ಷ ಜನರು ಬಂದು ಹೋಗುತ್ತಾರೆ. ಅದಕ್ಕೆ ಇನ್ನು ಹೆಚ್ಚಿನ ಸೌಲಭ್ಯಗಳನ್ನು ಕೊಡುವುದಕ್ಕೆ ನೀವು ಶಿಫಾರಸ್ಸು ಮಾಡಬೇಕೆಂದು ಪದೇಪದೇ ಶ್ರೀ ಆನಂದ ಮಾಮನಿಯವರು ಹೇಳುತ್ತಿದ್ದರು. ನಾನು ನೀರಾವರಿ ಸಚಿವನಾಗಿರುವುದರಿಂದ, ಹಿಂದೆ ಲೋಕೋಪಯೋಗಿ ಸಚಿವನಾಗಿದ್ದಂತಹ ಸಂದರ್ಭದಲ್ಲಿ ಕೂಡ ಬಹಳ ಪ್ರಮುಖ ರಸ್ತೆಗಳ ಬಗ್ಗೆ ಮೇಲ್ದರ್ಜೆಗೇರಿಸಬೇಕು, ಅಭಿವೃದ್ಧಿಪಡಿಸಬೇಕು ಎಂದು ಅವರು ಪ್ರಸ್ತಾಪ ಮಾಡುತ್ತಿದ್ದರು. ಅದೇ ರೀತಿಯಾಗಿ ಅವರ ಕ್ಷೇತ್ರದಲ್ಲಿ ಏತ ನೀರಾವರಿ ಯೋಜನೆಗಳು 25-30 ವರ್ಷಗಳಿಂದಲೇ ಆಗಿವೆ. ಯಂತ್ರೋಪಕರಣಗಳೆಲ್ಲಾ ಹಳೆ ಕಾಲದ್ದಾಗಿದ್ದು, ಎಲ್ಲವೂ ಹಾಳಾಗಿವೆ. ಆದ್ದರಿಂದ ಆ ಯಂತ್ರೋಪಕರಣಗಳನ್ನು ಬದಲಾವಣೆ ಮಾಡಿಕೊಡಬೇಕು ಎನ್ನುವಂತಹ ಚಿಂತನೆಗಳನ್ನು ಅವರು ಮಾಡುತ್ತಿದ್ದರು. ಅವರೊಬ್ಬ ಅಪರೂಪದ ರಾಜಕಾರಣಿ. ಎಲ್ಲಾ ಜನರ ಜೊತೆಯಲ್ಲಿ ಬೆರತು ಕೆಲಸ ಮಾಡುತ್ತಿದ್ದರು. ಅವರ ಕ್ಷೇತ್ರ ನನ್ನ ಪಕ್ಕದ ಕ್ಷೇತ್ರವಾಗಿರುವುದರಿಂದ ಬಹಳಷ್ಟು ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡಿ ಜನಪ್ರಿಯರಾಗಿದ್ದರು. ಶ್ರೀ ಶ್ರೀಶೈಲಪ್ಪ ಬಿದರೂರುರವರು ನನ್ನ ಜೊತೆಯಲ್ಲಿ 1994 ರಲ್ಲಿ ಶಾಸಕರಾಗಿ ಕೆಲಸ ಮಾಡಿದ್ದರು. ಬಹಳ ಅಪರೂಪದ ರಾಜಕಾರಣಿ, ಸರಳ ಸಜ್ಜನ ರಾಜಕಾರಣಿ. ಅವರು ನಮ್ಮನ್ನು ಇಷ್ಟು ಬೇಗ ಅಗಲುತ್ತಾರೆಂದು ಯಾರೂ ಕೂಡ ನಿರೀಕ್ಷೆಯನ್ನು ಮಾಡಿರಲಿಲ್ಲ.

ಶ್ರೀ ಜಬ್ಬಾರ್ ಖಾನ್ ಹೊನ್ನಳ್ಳಿ ಕೂಡ ಒಬ್ಬ ಸರಳ-ಸಜ್ಜನಿಕೆಯ ರಾಜಕಾರಣಿ. ಅವರು ಶಾಸಕರಾದರೂ ಕೂಡ ಮಾಸ್ತರರಾಗಿಯೇ ಇದ್ದರು. ಅವರದ್ದು ಶಿಕ್ಷಕರ ತರಹವೇ ವರ್ತನೆ ಇತ್ತು ಹಾಗೂ ಅವರೊಬ್ಬ ಬಹಳ ಒಳ್ಳೆಯ ಮನುಷ್ಯ ಹಾಗೂ ಮಿತಭಾಷಿ. ಅವರು ಸಹ ನಮ್ಮನ್ನಗಲಿದ್ದಾರೆ. ಶ್ರೀ ಎಸ್.ಎಸ್.ಪೂಜಾರಿರವರು, ಶ್ರೀ ಸುಧೀಂದ್ರರಾವ್ ಕಸಬೆ, ಶ್ರೀ ಕೋಳೂರು ಬಸವನಗೌಡರು, ಶ್ರೀ ಅಬ್ದುಲ್ ಸಮದ್ ಸಿದ್ಧಿಖಿಯವರು, ಶ್ರೀ ಟಿ.ಎಸ್.ಲೋಹಿತಾಶ್ವರವರು, ಶ್ರೀ ಬಂಗಾರ್ ಆಚಾರ್‌ರವರು, ಶ್ರೀ ಕಲ್ಮನೆ ಕಾಮೇಗೌಡರು ಹಾಗೂ ಶ್ರೀ ಆರ್.ಎಲ್.ಕಶ್ಯಪ್‌ರವರು ಈ ಎಲ್ಲಾ ಮಹನೀಯರ ಅಗಲಿಕೆಯಿಂದ ಸಮಾಜಕ್ಕೆ ತುಂಬಲಾರದ ನಷ್ಟವಾಗಿದೆ. ಅತ್ಯುತ್ತಮವಾದ ಸಮಾಜ ಸೇವಕರನ್ನು ನಾವುಗಳು ಕಳೆದುಕೊಂಡಿದ್ದೇವೆ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಅಗಲಿದ 11 ಜನ ಮೃತರ ಆತ್ಮಕ್ಕೆ ಆ ಭಗವಂತ ಚಿರಶಾಂತಿಯನ್ನು ಕಲ್ಪಿಸಲಿ, ಅವರ ಕುಟುಂಬ ವರ್ಗದವರಿಗೆ ಆಗಿರತಕ್ಕಂಥ ನೋವಿನಲ್ಲಿ ನಾವೆಲ್ಲರೂ ಕೂಡ ಭಾಗಿಯಾಗಿದ್ದೇವೆ ಮತ್ತು ಅವರು ಹಾಕಿಕೊಂಡಂತಹ ಕಾರ್ಯಕ್ರಮಗಳನ್ನು ಮುಂದುವರೆಸಲಿಕ್ಕೆ ನಾವೆಲ್ಲರೂ ಸಹಕರಿಸಬೇಕು ಎಂದು ಹೇಳುತ್ತಾ, ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು.

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಯವರೇ, ಶ್ರೀ ಕಟ್ಟೆ ಕಲ್ಮನೆ ಕಾಮೇಗೌಡರು ಇವರ ಬಗ್ಗೆ ಮಾನ್ಯ ಪ್ರಧಾನ ಮಂತ್ರಿಗಳು ತಮ್ಮ "ಮನ್ ಕೀ ಬಾತ್" ಕಾರ್ಯಕ್ರಮದಲ್ಲಿ ಮಾತನಾಡಿದಂಥ ಸಂದರ್ಭದಲ್ಲಿಯೇ ನಾವು ಮೊದಲನೇ ಬಾರಿಗೆ ಇವರ ಹೆಸರನ್ನು ಕೇಳಿದ್ದು. ಇವತ್ತು ನಮ್ಮ ಮಧ್ಯೆ ಅವರಿಲ್ಲ. ಮಾನ್ಯ ಪ್ರಧಾನ ಮಂತ್ರಿಗಳು ಅವರ ಬಗ್ಗೆ ಉಲ್ಲೇಖ ಮಾಡಿದ ಮೇಲೆ, ಅವರ ಬಗ್ಗೆ ಗೊತ್ತಾದ ನಂತರ ನಮಗೆ ಆಶ್ಚರ್ಯವಾಯಿತು. ಇಂತಹ ಒಬ್ಬ ದೊಡ್ಡ ವ್ಯಕ್ತಿ ನಮ್ಮ ಮಂಡ್ಯ ಜಿಲ್ಲೆಯಲ್ಲಿದ್ದಾರೆ, ಇಷ್ಟೊಂದು ಕೆರೆಗಳನ್ನು ಕಟ್ಟಿದ್ದಾರೆಂದು ನಮಗೆ ಗೊತ್ತೇ ಇಲ್ಲ. ಅವರ ಮನೆಗೆ ಹೋದಂಥ ಸಂದರ್ಭದಲ್ಲಿ ನಮಗೆ ಅಲ್ಲಿ ಕೂಡ ಆಶ್ಚರ್ಯವಾಯಿತು. ಅದೊಂದು ಸಣ್ಣ ಮನೆ ಹಾಗೂ ಅವರು ನಿಕ್ಕರ್ ಧರಿಸುವಂತಹ ಮತ್ತು ಕುರಿಗಳನ್ನು ಕಾಯತಕ್ಕಂಥ ಒಬ್ಬ ವ್ಯಕ್ತಿ. ಇದಾದ ಮೇಲೆ. ನಮ್ಮ ಅರುಣ್ ಕುಮಾರ್‌ರವರು ಅವರಿಗೆ ಸನ್ಮಾನ ಮಾಡಿದರು. ಆದರೆ ಇಡೀ ನಾಡಿಗೆ ನಾಡೇ, ದೇಶಕ್ಕೆ ದೇಶವೇ ಅಚ್ಚರಿ ವ್ಯಕ್ತಪಡಿಸಿತು.

ಹೆಚ್ಚಿನ ಶಿಕ್ಷಣ ಇಲ್ಲದೇ ಇರತಕ್ಕಂಥ ಒಬ್ಬ ವ್ಯಕ್ತಿ ಪರಿಸರಕ್ಕೆ, ದೇಶಕ್ಕೆ, ಸಮಾಜಕ್ಕೆ ಕೊಡುಗೆಯಾಗಿ ಕೊಟ್ಟಿರತಕ್ಕಂಥಾದ್ದು ಒಂದು ದೊಡ್ಡ ಆದರ್ಶವಾಗಿದ್ದು, ಅದನ್ನು ಅವರು ನಮಗೆ ಬಿಟ್ಟು ಹೋಗಿದ್ದಾರೆ. ಹಾಗಾಗಿ ಅವರ ಅಗಲಿಕೆಯಿಂದ ಅವರ ಕುಟುಂಬದವರಿಗೆ ಏನು ನಷ್ಟವಾಗಿದೆ, ಅದನ್ನು ಭರಿಸುವಂಥ ಶಕ್ತಿಯನ್ನು ಆ ಭಗವಂತ ಕರುಣಿಸಲಿ ಎಂದು ಈ ಸಂದರ್ಭದಲ್ಲಿ ನಾನು ಪ್ರಾರ್ಥಿಸುತ್ತೇನೆ.

ಇನ್ನು ಶ್ರೀ ಕೋಳೂರು ಬಸವನಗೌಡರ ಬಗ್ಗೆ ಹೇಳುವುದಾದರೆ, ಅವರು ಬಹಳ ಹಿರಿಯರು. ನಾನಾಗ ಗುಲ್ಬರ್ಗಾ, ಬೀದರ್, ರಾಯಚೂರು, ಬಳ್ಳಾರಿ, ಕೊಪ್ಪಳ ಈ ಭಾಗಕ್ಕೆ ವಿದ್ಯಾರ್ಥಿ ಪರಿಷತ್ ಸಂಘಟನೆ ಮಾಡುತ್ತಿದ್ದಂಥ ಸಂದರ್ಭದಲ್ಲಿ ಕೋಳೂರು ಬಸವನಗೌಡರು ಕಾಂಗ್ರೆಸ್ಸಿನ ವ್ಯಕ್ತಿ. ಆದರೆ ಕಾಲೇಜಿನಲ್ಲಿ ಕಾರ್ಯಕ್ರಮಗಳನ್ನು ಮಾಡಲಿಕ್ಕೆ ಅನುಮತಿಯನ್ನು ಕೇಳಿದರೆ ಏನೂ ತಕರಾರು ಇಲ್ಲದ ಹಾಗೆ ಕೊಡುತ್ತಿದ್ದರು. ಅವರು ಈ ರೀತಿ ಅನುಮತಿಯನ್ನು ಕೊಟ್ಟರಲ್ಲಾ ಎಂದು ನಮಗೆ ಆಶ್ಚರ್ಯವಾಗುತ್ತಿತ್ತು. ನೀವು ಒಳ್ಳೆಯ ಕೆಲಸವನ್ನು ಮಾಡುತ್ತೀರಿ, ಅನುಮತಿ ಕೊಟ್ಟಿದ್ದೇನೆ ಎನ್ನುತ್ತಿದ್ದರು. ಇಷ್ಟು ಸರಳ ಹಾಗೂ ಹಾಸ್ಯ ಪ್ರವೃತ್ತಿ ಇರುವಂಥವರು. ಅವರು ಅನೇಕ ಸಾರಿ ನಮಗೆಲ್ಲಾ ಅವರ ಮನೆಗೆ ಊಟಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಹೀಗೆ ಅವರು ಪಾರ್ಲಿಮೆಂಟ್‌ನ ಸದಸ್ಯರಾದರು ಮತ್ತು ಬಹಳ ಸರಳವಾಗಿ ಓಡಾಡುತ್ತಿದ್ದಂಥ ದೊಡ್ಡ ವ್ಯಕ್ತಿ ಮತ್ತು ವೀರಶೈವ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾಗಿದ್ದರು. ಹಾಗಾಗಿ ಅವರ ಕುಟುಂಬದವರಿಗೆ ಅವರ ಅಗಲಿಕೆಯಿಂದ ಆಗಿರತಕ್ಕಂಥ ನಷ್ಟವನ್ನು ಭರಿಸುವಂತಹ ಶಕ್ತಿಯನ್ನು ಭಗವಂತ ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ.

ಇನ್ನು ಶ್ರೀ ಜಬ್ಬಾರ್ ಖಾನ್ ಹೊನ್ನಳ್ಳಿರವರು ಅಂಜುಮನ್ ಶಿಕ್ಷಣ ಸಂಸ್ಥೆಯನ್ನು ಕಟ್ಟುವುದರಲ್ಲಿ ನಿರತರಾದವರು. ವಿದ್ಯಾರ್ಥಿ ಪರಿಷತ್‌ನಲ್ಲಿ ನಾನು ಸ್ಟೇಟ್ ಸೆಕ್ರೆಟರಿ ಆಗಿದ್ದೆ. ಆಗ ಕಲ್ಬುರ್ಗಿ ನಂತರ ಹುಬ್ಬಳ್ಳಿ ನನ್ನ ಕೇಂದ್ರವಾಗಿತ್ತು. ನಾವು ಹೋರಾಟಗಳು ಮಾಡುತ್ತಿದ್ದ ಸಂದರ್ಭದಲ್ಲಿ ಅವರು ಸಚಿವರಾಗಿದ್ದರು ಎನ್ನುವ ಕಾರಣದಿಂದ memorandum, ಇತ್ಯಾದಿ ಕೊಡುವುದಕ್ಕಾಗಿ ಅವರಲ್ಲಿಗೆ ಹೋಗುತ್ತಿದ್ದೆವು. ಅವರು ಬಹಳ ಉನ್ನತ ಶಿಕ್ಷಣವನ್ನು ಪಡೆದಂಥ ವ್ಯಕ್ತಿ ಅಲ್ಲದಿದ್ದರೂ ಬಹಳ ಸರಳ ವ್ಯಕ್ತಿತ್ವದವರಾಗಿದ್ದರು. ಅವರು ಬಹುಶಃ ನಾನು ಮೊದಲನೇ ಬಾರಿ ನೋಡಿದಾಗ, ಮುಸಲ್ಮಾನ್

ಸಮಾಜಕ್ಕೆ ಸೇರಿದಂಥ ವ್ಯಕ್ತಿಯಾಗಿದ್ದರೂ ಕೂಡ ಮುಸಲ್ಮಾನ್ ಸಮುದಾಯಕ್ಕಿಂತ ಹೆಚ್ಚಾಗಿ ಎಲ್ಲಾ ಸಮುದಾಯದವರ ಜೊತೆಗೆ ಸಂಪರ್ಕ ಇರುತ್ತಿತ್ತು. ಬಹಳ ಸಹಜವಾಗಿ ಎಲ್ಲರೊಂದಿಗೆ ಬೆರೆಯುತ್ತಿದ್ದರು. ಅವರ ಕಾಲದಲ್ಲಿ ಅಂಜುಮನ್ ಶಿಕ್ಷಣ ಸಂಸ್ಥೆ ವ್ಯಾಪಕತೆಯನ್ನು ಪಡೆದುಕೊಂಡಿದ್ದಂತಹ ಸಂದರ್ಭದಲ್ಲಿ ಸಮಾಜದಲ್ಲಿ ನಿರ್ಮಾಣವಾಗಿದ್ದ ಆ ರೀತಿಯ ಒಂದು ಅಂತರವನ್ನು ಕಡಿಮೆ ಮಾಡುವುದರಲ್ಲಿ ಅವರದ್ದೂ ಕೂಡ ಪ್ರಮುಖ ಪಾತ್ರವಾಗಿತ್ತು ಎಂದು ಹೇಳಿ, ಶ್ರೀ ಜಬ್ಬಾರ್ ಖಾನ್ ಹೊನ್ನಳ್ಳಿಯವರ ಬಗ್ಗೆ ಎರಡು ಹಿತ ನುಡಿಗಳನ್ನು ಹೇಳಲು ಬಯಸುತ್ತೇನೆ.

(ಮುಂದು)

(1046) 19/12/2022/ಎಸ್‌ಪಿಆರ್-ಆರ್‌ಎನ್/12:20 (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎನ್.ರವಿಕುಮಾರ್ (ಮುಂದು):**

ಅವರ ಸಮಾಜಕ್ಕೂ ಹಾಗೂ ಅವರ ಕುಟುಂಬಕ್ಕೂ ಆಗಿರುವ ನಷ್ಟವನ್ನು ತುಂಬಿಕೊಡುವ ಶಕ್ತಿಯನ್ನು ಭಗವಂತನು ಕರುಣಿಸಲೆಂದು ನಾನು ಪ್ರಾರ್ಥಿಸುತ್ತೇನೆ. ಈ ಸಂದರ್ಭದಲ್ಲಿ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನೆರೆಡು ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ 10 ಮಹನೀಯರುಗಳು ನಿಧನರಾಗಿರುವ ಬಗ್ಗೆ ಸಂತಾಪ ಸೂಚನೆಯಲ್ಲಿ ಪ್ರಸ್ತಾಪಿಸಲಾಗಿದೆ. ಅದಕ್ಕೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ. ಅವರ ಕುಟುಂಬದ ಎಲ್ಲಾ ಸದಸ್ಯರಿಗೆ ಆ ದುಃಖವನ್ನು ಸಹಿಸುವ ಶಕ್ತಿಯನ್ನು ದೇವರು ನೀಡಲೆಂದು ನಾನು ಪ್ರಾರ್ಥಿಸುತ್ತೇನೆ.

ಮೃತರಾದ ಇಬ್ಬರ ಬಗ್ಗೆ ನಾನು ಮಾತನಾಡಲು ಬಯಸುತ್ತೇನೆ; ಆ ಪೈಕಿ ಮೊದಲನೇಯದಾಗಿ ಶ್ರೀ ಎಸ್.ಎಸ್.ಪೂಜಾರಿ ರವರ ಬಗ್ಗೆ ಮಾತನಾಡುತ್ತೇನೆ. ಮಾನ್ಯ ಬಸವರಾಜ ಹೊರಟ್ಟಿ ಹಾಗೂ ಶ್ರೀ ಎಸ್.ಎಸ್.ಪೂಜಾರಿ ರವರುಗಳು ಇಡೀ ನಮ್ಮ ರಾಜ್ಯದಲ್ಲಿ ರಾಜ್ಯ ಮಟ್ಟದ ಮಾಧ್ಯಮಿಕ ಶಾಲಾ

ನೌಕರರ ಸಂಘವನ್ನು ಸ್ಥಾಪಿಸಿದರು. ಅದರ ಮೂಲಕ ಹಲವಾರು ಶಿಕ್ಷಕರ ಸಮಸ್ಯೆಗಳನ್ನು ಅದರಲ್ಲೂ ವಿಶೇಷವಾಗಿ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಯ ನೌಕರರ ಸಮಸ್ಯೆಗಳನ್ನು ಬಗೆಹರಿಸಿದ ಕೀರ್ತಿ ಇವತ್ತಿನ ದಿಸವ ಇವರಿಬ್ಬರಿಗೆ ಸಲ್ಲುತ್ತದೆ ಎಂದು ನಾನು ಹೇಳಬಯಸುತ್ತೇನೆ. ದಿವಂಗತ ಎಸ್.ಎಸ್.ಪೂಜಾರಿ ರವರು ಬಹಳ ಸೌಮ್ಯ ಸ್ವಭಾವದವರು ಹಾಗೂ ಸರಳ ವ್ಯಕ್ತಿಯಾಗಿದ್ದರು. ಇವರಿಗೆ ಸರಳ ವ್ಯಕ್ತಿತ್ವ ಎಷ್ಟರಮಟ್ಟಿಗೆ ಇತ್ತೆಂದರೆ, ಪ್ರಾಯಶಃ, ಬೆಂಗಳೂರು ನಗರದಲ್ಲಿ ಅವರು ವಿಧಾನ ಪರಿಷತ್ತಿನ ಸದಸ್ಯರಾದಾಗ, ಅವರಿಗೆ ನೀಡಲಾಗುತ್ತಿದ್ದ ವಾಹನ ಸೌಲಭ್ಯವನ್ನು ಅವರು ಎಂದಿಗೂ ಸಹ ಉಪಯೋಗಿಸುತ್ತಿರಲಿಲ್ಲ. ಅಧಿವೇಶನ ಸಂದರ್ಭದಲ್ಲಿ ಶಾಸಕರ ಭವನದ ಕೊಠಡಿಯಿಂದ ನಡಿಗೆಯಿಂದಲೇ ಆಗಮಿಸುತ್ತಿದ್ದರು. ಬೇರೆ ಕಡೆಗಳಲ್ಲಿ ರಿಕ್ಷಾಗಳ ಮೂಲಕ ಸಂಚರಿಸುತ್ತಿದ್ದರು. ಯಾವುದೇ ಶಿಕ್ಷಕರ ಸಮಸ್ಯೆಗಳಿರಲಿ, ಆಯಾ ಇಲಾಖೆಗಳಿಗೆ ಖುದ್ದು ಹೋಗಿ ಬಗೆಹರಿಸುವ ವ್ಯಕ್ತಿತ್ವವನ್ನು ಹೊಂದಿದ್ದರು. ಈ ಸಂದರ್ಭದಲ್ಲಿ ನಾನೊಂದು ಮಾತನ್ನು ಹೇಳಬಯಸುತ್ತೇನೆ. ಶ್ರೀ ಬಸವರಾಜ ಹೊರಟ್ಟಿ ಹಾಗೂ ಎಸ್.ಎಸ್.ಪೂಜಾರಿ ರವರುಗಳು ಖಾಸಗಿ ಶಿಕ್ಷಣ ಸಂಸ್ಥೆಗಳ ಶಿಕ್ಷಕರೂ ಸಹ ವಿಧಾನ ಪರಿಷತ್ತಿನ ಸದಸ್ಯರಾಗಬಹುದು ಎಂಬುದನ್ನು ತೋರಿಸಿಕೊಟ್ಟವರಾಗಿದ್ದಾರೆ. ಈ ಸಂಗತಿಯು ನಮಗೆ ತಿಳಿದಿರಲಿಲ್ಲ. ವಿಧಾನ ಪರಿಷತ್ತಿನ ಸದಸ್ಯರಾಗಲು, ಶಿಕ್ಷಕರಾಗಿ ಕೆಲಸ ನಿರ್ವಹಿಸುತ್ತಿರುವವರು ರಾಜೀನಾಮೆಯನ್ನು ಕೊಟ್ಟ ನಂತರ ಚುನಾವಣೆಯಲ್ಲಿ ಭಾಗವಹಿಸಬೇಕೆಂದು ನಾವುಗಳೆಲ್ಲರೂ ಭಾವಿಸಿದ್ದೇವು. ಹೀಗಾಗಿ ಖಾಸಗಿ ಶಿಕ್ಷಣ ಸಂಸ್ಥೆಯ ಶಿಕ್ಷಕರು ಯಾರೂ ಸಹ ವಿಧಾನ ಪರಿಷತ್ತಿನ ಸದಸ್ಯರಾಗಲು ಬಯಸುತ್ತಿರಲಿಲ್ಲ ಹಾಗೂ ಚುನಾವಣೆಯಲ್ಲಿ ಸ್ಪರ್ಧಿಸುತ್ತಿರಲಿಲ್ಲ. ಹಾಲಿ ಉದ್ಯೋಗಕ್ಕೆ ರಾಜೀನಾಮೆ ನೀಡಿ ಚುನಾವಣೆಗೆ ಏಕೆ ಸ್ಪರ್ಧಿಸಬೇಕು ಎನ್ನುವುದು ಅವರ ಮನೋಭಾವವಾಗಿತ್ತು. ಆದರೆ, ಇವರಿಬ್ಬರುಗಳು ಈ ವಿಚಾರದಲ್ಲಿ ನಮಗೆಲ್ಲಾ ಒಂದು ಉದಾಹರಣೆಯಾದರು. ಇದೇ ಪ್ರೇರಣೇಯಿಂದಲೇ ಇವತ್ತಿನ ದಿವಸ ನಾನೂ ಸಹ ವಿಧಾನ ಪರಿಷತ್ತಿನ ಸದಸ್ಯನಾಗಿ ಆಯ್ಕೆಗೊಂಡು, ಸದನದೊಳಗೆ ಬಂದಿದ್ದೇನೆ. ಎಸ್.ಎಸ್.ಪೂಜಾರಿರವರು ಬಹಳಷ್ಟು ಹೋರಾಟಗಳನ್ನು ಮಾಡಿದ್ದಾರೆ. ಶ್ರೀಯುತ ಹೊರಟ್ಟಿಯವರ ನೇತೃತ್ವದಲ್ಲಿ ಇವರು ಹಾಗೂ ನಾವುಗಳೆಲ್ಲರೂ ಹೋರಾಟಗಳನ್ನು ಮಾಡಿದ್ದೇವೆ. ಇವರ ಸಂಘದಲ್ಲಿ ನಾನೂ ಸಹ ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದ ಅಧ್ಯಕ್ಷನಾಗಿ ಅವರ ಮಾರ್ಗದರ್ಶನದಡಿ ಕರ್ತವ್ಯ ನಿರ್ವಹಿಸಿದ್ದೇನೆ. ಆ ದಿನಗಳಲ್ಲಿ

ಸ್ವತಂತ್ರವಾಗಿ ಆಯ್ಕೆಗೊಳ್ಳುವುದು ಬಹಳ ಕಷ್ಟವಾಗಿತ್ತು. ಆದರೆ, ಸ್ವತಂತ್ರ ಅಭ್ಯರ್ಥಿಯಾಗಿ ಶ್ರೀ ಹೊರಟ್ಟಿ ಹಾಗೂ ಎಸ್.ಎಸ್.ಪೂಜಾರಿ ರವರುಗಳು ನಿರಂತರವಾಗಿ ಆಯ್ಕೆಗೊಂಡು ಬಂದು, ಆದರ್ಶ ಸದಸ್ಯರಾಗಿ, ಅತ್ಯಂತ ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸಿದ್ದಾರೆ. ಶ್ರೀಯುತರ ಆತ್ಮಕ್ಕೆ ನಾನು ಶಾಂತಿಯನ್ನು ಕೋರುತ್ತೇನೆ.

ನಮ್ಮದೇ ಭಾಗದವರಾದ ಶ್ರೀ ಶ್ರೀಶೈಲಪ್ಪ ಬಿದರೂರುರವರು ರೋಣ ತಾಲ್ಲೂಕಿನವರಾಗಿದ್ದು, ನಾನೂ ಸಹ ರೋಣ ತಾಲ್ಲೂಕಿನವನಾಗಿದ್ದೇನೆ. ಈ ಮೊದಲು ಅವರು ಮಂಡಲದ ಪ್ರಧಾನರಾಗಿ ಆಯ್ಕೆಗೊಂಡು, ನಂತರದಲ್ಲಿ ಜನತಾದಳದಿಂದ ರೋಣ ಮತ ಕ್ಷೇತ್ರದಿಂದ, ಆ ನಂತರ ಗದಗ ಮತ ಕ್ಷೇತ್ರದಿಂದ ಭಾರತೀಯ ಜನತಾ ಪಕ್ಷದ ಮೂಲಕ ಎರಡು ಬಾರಿ ವಿಧಾನ ಸಭೆಯ ಸದಸ್ಯರಾಗಿ ಆಯ್ಕೆಗೊಂಡರು. ರೋಣ ಮತ್ತು ಗದಗ ಮತ ಕ್ಷೇತ್ರಗಳ ಸರ್ವಾಂಗೀಣ ಅಭಿವೃದ್ಧಿಗಾಗಿ ಅತ್ಯಂತ ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸಿದ್ದರು. ಅವರ ಅಧಿಕಾರಾವಧಿಯಲ್ಲಿ ಅಲ್ಲಿ ಜಿಲ್ಲಾ ಆಸ್ಪತ್ರೆಯ ನಿರ್ಮಾಣವಾಯಿತು. ಇದರಿಂದ ಈಗ ಇದು ವೈದ್ಯಕೀಯ ಕಾಲೇಜಾಗಿ ಆಗಲು ಅನುಕೂಲವಾಯಿತು. ಇಡೀ ನಮ್ಮ ದೇಶದಲ್ಲಿಯೇ ಅತ್ಯಂತ ಎತ್ತರದ ಬಸವಣ್ಣನವರ ಮೂರ್ತಿಯು ಅವರ ಕಾಲದಲ್ಲಿಯೇ ಸ್ಥಾಪಿತವಾಯಿತು. ಇದಲ್ಲದೇ ಪಶು ವೈದ್ಯಕೀಯ ಕಾಲೇಜು ಸಹ ಅವರ ಅವಧಿಯಲ್ಲಿಯೇ ಆಗಿದೆ. ಮೃತರ ಆತ್ಮಕ್ಕೂ ಸಹ ನಾನು ಶಾಂತಿಯನ್ನು ಕೋರುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರು:-** ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

ಮೃತರ ಗೌರವಾರ್ಥ ಮಾನ್ಯ ಶಾಸಕರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಮೃತರ ಗೌರವಾರ್ಥ ಸದನದಲ್ಲಿ ಉಪಸ್ಥಿತರಿದ್ದವರೆಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಿದರು)**

ಸದನದಲ್ಲಿ ಪ್ರಸ್ತಾಪಿಸಿದ ಸಂತಾಪ ಸೂಚನೆಯ ನಿರ್ಣಯವನ್ನು ಮೃತ ಗಣ್ಯರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

ಈಗ ಸಭೆಯು ಮುಕ್ತಾಯವಾಗಿ ಪುನಃ ನಾಳೆ ಬೆಳಗ್ಗೆ 11:00 ಗಂಟೆಗೆ ಸೇರುವುದು.

**(ಸದನವು ಅಪರಾಹ್ನ 12 ಗಂಟೆ 25 ನಿಮಿಷಕ್ಕೆ ಮುಕ್ತಾಯಗೊಂಡು,**
**ಪುನಃ ದಿನಾಂಕ: 20ನೇ ಡಿಸೆಂಬರ್ ಮಾಹೆ 2022ರ ಮಂಗಳವಾರದಂದು**
**ಬೆಳಗ್ಗೆ 11-00 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)**

**<><><>**